27TH YEAR OF PUBLICATION. PHONE 728 ಬೆಲೆ: ಎರಡಾಣೆ.

ಪ್ರಭಾತ

ಸಂಪುಟ: ೨೭. ಸಂಚಿಕೆ: ೩೬. 15—10—1961 Vol. XXVII. No. 36

ಲೇಖಾಂಕ ೨೬.

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೊ.ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ಸಭಾಪರ್ವ

ಸಭಾನಿರ್ಮಾಣ ಮತ್ತು ರಾಜಸೂಯ ದೀಕ್ಷೆ

ನಾರಾಯಣಂ ನಮಸ್ಕೃತ್ಯ ನರಂ ಚೈವ
ನರೋತ್ತಮಮ್
ದೇವೀಂ ಸರಸ್ವತೀಂ ವ್ಯಾಸಂ ತತೋ
ಜಯ ಮುದೀರಯೇತ್ ॥

ಅಂತರ್ಯಾಮಿ ಯಾದ ನಾರಾಯಣ ಸ್ವರೂಪನಾದ ಶ್ರೀಕೃಷ್ಣನನ್ನು, ನರ ಶ್ರೇಷ್ಠನಾದ ಅರ್ಜುನನನ್ನು, ಭಗವತೀ ಸರಸ್ವತಿಯನ್ನು ಮತ್ತು ವೇದವ್ಯಾಸನನ್ನು ನಮಸ್ಕರಿಸಿ, ಜಯವನ್ನು ಎಂದರೆ ಮಹಾಭಾರತವು ಹೇಳಲ್ಪಡುವುದು.

ಖಾಂಡವ ವನವು ದಹನವಾಗುತ್ತಿದ್ದಾಗ ಮಯನೆಂಬ ರಾಕ್ಷಸನು ತಪ್ಪಿಸಿಕೊಂಡು ಹೋಗಿದ್ದನು. ಅವನು ದಹನ ಕಾರ್ಯವಾದ ಮೇಲೆ ಬಂದು ಶ್ರೀಕೃಷ್ಣ ಮತ್ತು ಅರ್ಜುನನನ್ನು ನಮಸ್ಕರಿಸುತ್ತ ಹೀಗೆಂದನು: "ಕುಂತೀನಂದನ! ನೀನು ನನ್ನನ್ನು ಅಗ್ನಿಯಿಂದ ರಕ್ಷಿಸಿರುವಿ. ಈ ಉಪಕಾರಕ್ಕಾಗಿ ನಾನು ನಿನ್ನನ್ನು ಹೇಗೆ ಸೇವೆ ಮಾಡಲಿ?"

"ಅಸುರರಾಜ! ಈ ಪ್ರಕಾರ ಕೃತಜ್ಞತೆಯನ್ನು ತೋರಿಸಿದ ನಿನಗೆ ಶುಭವಾಗಲಿ. ಆದಕಾರಣ ನೀನು ನಿನ್ನ ಕಾರ್ಯಾರ್ಥ ಹೋಗಬಹುದು. ನಮ್ಮಲ್ಲಿ ನಿನ್ನ ಪ್ರೀತಿ ಇರಲಿ" ಎಂದು ಅರ್ಜುನನು ನುಡಿದನು.

ಆ ಮಾತಿಗೆ ಮಯನು "ಪ್ರಭೋ! ಪುರುಷೋತ್ತಮ! ಎರಡು ಮಾತನ್ನು ನಿವೇದಿಸಲು ಕೋರುತ್ತೇನೆ. ನಾನು ದಾನವರ ಶಿಲ್ಪವಿದ್ಯಾಪಂಡಿತನಾಗಿರುವೆನು. ಆದ್ದರಿಂದ ನಿನ್ನ ಅಪೇಕ್ಷೆಯಂತೆ ದಿವ್ಯಮಂದಿರವನ್ನು ರಚಿಸಲು ಅಪ್ಪಣೆಯಾಗಲಿ.

"ಪುನಃ ಪುನಃ ಪ್ರಾರ್ಥಿಸುವ ನಿನ್ನ ಸಂಕಲ್ಪವನ್ನು ನಾನು ಏಕೆ ವ್ಯರ್ಥ ಮಾಡಲಿ. ಶ್ರೀಕೃಷ್ಣ ಪರಮಾತ್ಮನು ಹೇಳುವಂತೆ ಮಾಡು" ಎಂದು ಅರ್ಜುನನು ಪ್ರತಿನುಡಿದನು.

ಆಗ ಶ್ರೀಕೃಷ್ಣನು: "ಶಿಲ್ಪಿಗಳಲ್ಲಿ ಶ್ರೇಷ್ಠನಾದ ದೈತ್ಯರಾಜ ಮಯನೆ! ನಿನಗೆ ಅಂತಹ ಪ್ರತ್ಯುಪಕಾರವನ್ನು ಮಾಡಬೇಕೆಂಬ ಆತುರವಿದ್ದರೆ, ಧರ್ಮರಾಜ ಯುಧಿಷ್ಠಿರನಿಗೊಂದು ದಿವ್ಯ ಸಭಾಭವನವನ್ನು ರಚಿಸು."

ಶ್ರೀಕೃಷ್ಣನ ಆಜ್ಞೆಯನ್ನು ಶಿರೋಧಾರ್ಯಮಾಡಿ ಮಯಾಸುರನು ಬಹಳ ಪ್ರಸನ್ನನಾಗಿ, ಪೂರ್ಣ ಮತ್ತು ಶುಭ ಮುಹೂರ್ತದಲ್ಲಿ ಮಂಗಲಾನುಷ್ಠಾನ, ಸ್ವಸ್ತಿವಾಚನಾದಿಗಳು ಆದ ಮೇಲೆ ಒಂದು ದಿವ್ಯಸಭಾ ಮಂದಿರವನ್ನು ರಚಿಸಿದನು. ಇತ್ತ ಪಾಂಡವರ ಮತ್ತು ಅವರ ಪತ್ನಿ ದ್ರೌಪದಿಯ ಅನುಮತಿಯನ್ನು ಪಡೆದು ಶ್ರೀಕೃಷ್ಣನು ಸುವರ್ಣಮಯ ರಥಾರೂಢನಾಗಿ ದ್ವಾರಕೆಗೆ ತೆರಳಿದನು.

ಪುಣ್ಯಾಹ ವಾಚನಾದಿ ಕಾರ್ಯಗಳನ್ನು ನೆರವೇರಿಸಿ ಸಮಯ ನಿರ್ಮಿತವಾದ ಸಭಾಭವನವನ್ನು ತಮ್ಮಂದಿರೊಡನೆ ಪ್ರವೇಶಿಸಿದನು. "ಸ್ವರ್ಗದಲ್ಲಿ ಇಂದ್ರನೋಪಾದಿಯಲ್ಲಿ ಈ ರಮಣೀಯ ಸಭೆಯಲ್ಲಿ ಧರ್ಮರಾಯನು ವೇದ ವೇದಾಂಗ ಪಾರಂಗತರಾದ ಮುನಿಶ್ರೇಷ್ಠರು, ಮಂತ್ರಿಗಳು, ಪುರಜನರು ವಿರಾಜಿಸುವಾಗ, ದೇವರ್ಷಿ ನಾರದರು ಆಗಮಿಸಿದರು. ಅಸಂಖ್ಯ ಸದ್ಗುಣ ಸಂಪನ್ನ ಮಹಾತೇಜಸ್ವಿ ನಾರದರು ಬರುವುದನ್ನು ನೋಡಿ ಧರ್ಮರಾಯನು ಎದ್ದು ಋಷಿಮುನಿಗಳೊಡನೆ ಇದಿರುಗೊಂಡು ವಿನಯ ಮತ್ತು ನಮ್ರತಾಪೂರ್ವಕ ವಂದಿಸಿ, ಯೋಗ್ಯ ಆಸನವನ್ನಿತ್ತು ಅರ್ಘ್ಯಾದಿಗಳಿಂದ ವಿಧಿಪೂರ್ವಕ ಪೂಜಿಸಿದನು. ನಾರದರು ಯುಧಿಷ್ಠಿರನ ಸತ್ಕಾರದಿಂದ ಬಹಳ ಪ್ರಸನ್ನರಾಗಿ ರಾಜಾ! ಧರ್ಮದಲ್ಲಿ ನಿನ್ನ ಮನಸ್ಸು ಪ್ರಸನ್ನ ಪೂರ್ವಕವಾಗಿ ನೆಲಸಿರುವುದೇ? ಸುಖಭೋಗಗಳು ಪ್ರಾಪ್ತವಾಗುತ್ತಿವೆಯೇ? ಭಗವಚ್ಚಿಂತನೆಯಲ್ಲಿ ನಿನ್ನ ಮನಸ್ಸು ವಿಕ್ಷೇಪಗಳಿಲ್ಲದೆ ನೆಲಸುತ್ತಿದೆಯೇ? ಧರ್ಮಾರ್ಥಯುಕ್ತ ಉತ್ತಮ ವ್ಯವಹಾರವನ್ನು ಮಾಡುತ್ತಿರುವೆಯಷ್ಟೆ? ಮಹಾರಾಜ! ನಿದ್ರೆ, ಆಲಸ್ಯ, ಭಯ, ಕ್ರೋಧ, ಕಠೋರತೆ ಮತ್ತು ಕಾಲಹರಣ ಮಾಡುವ ಈ ಆರು ದೋಷಗಳನ್ನು ತ್ಯಜಿಸಿರುವೆಯಾ?" ಎಂದು ವಿಚಾರಿಸಿದರು.

ನಾರದರ ಮಾತನ್ನು ಕೇಳಿ, ಅಭಿವಾದನೆಗೈದು ಅತ್ಯಂತ ಸಂತುಷ್ಟನು ಈ ಪ್ರಕಾರ ನಿವೇದಿಸಿದನು: "ದೇವರ್ಷಿಯೆ! ನೀವು ಹೇಗೆ ಉಪದೇಶಿಸುವಿರೋ ಆ ಪ್ರಕಾರ ಮಾಡುವೆನು.

ಆ ಮಾತಿಗೆ ನಾರದರು:

ಏವಂ ಯೋ ವರ್ತತೇ ರಾಜಾ
ಚಾತುರ್ವರ್ಣ್ಯಸ್ಯ ರಕ್ಷಣೇ ।
ಸ ವಿಹೃತ್ಯೇಹ ಸುಸುಖೀ ಶಕ್ರಸ್ಯೈತಿ
ಸಲೋಕತಾಮ್ ॥ ೫-೧೨೯ ॥

ಯಾವ ರಾಜನು ಚಾತುರ್ವರ್ಣ್ಯಗಳ ರಕ್ಷಣೆ, ಪರಿಪಾಲನೆಯಲ್ಲಿ ಸಂಲಗ್ನನಾಗಿರುವನೋ ಅವನು ಈ ಲೋಕದಲ್ಲಿ ಅತ್ಯಂತ ಸುಖಿಯಾಗಿ ಬಾಳಿ, ನಂತರ ದೇವೇಂದ್ರ ಲೋಕವನ್ನು ಸೇರುವನು. ತಾತಾ! ರತ್ನಮಯವಾದ ಈ ಸಭಾಭವನದಂತೆ ಮನುಷ್ಯ ಲೋಕದಲ್ಲಿ ಎಲ್ಲಿಯೂ ಯಾವ ರಾಜರ ಕಾಲದಲ್ಲಿಯೂ ನಿರ್ಮಿತವಾಗಿರುವುದೇ ಇಲ್ಲ. ಇಂದ್ರನ ತೇಜೋಮಯವಾದ ದಿವ್ಯ ಸಭಾಭವನವು ವಿಶ್ವಕರ್ಮನಿಂದ ನಿರ್ಮಾಣವಾಗಿದೆ. ಆದಕ್ಕಾಗಿ ಮಹೇಂದ್ರನು ನೂರು ಯಜ್ಞವನ್ನು ಮಾಡಿರುವನು. ನಾನು ಯಮರಾಜ, ವರುಣದೇವ, ಕುಬೇರ ಮತ್ತು ಬ್ರಹ್ಮದೇವ ಇವರೆಲ್ಲರ ಸಭಾಭವನಗಳನ್ನು ನೋಡಿದ್ದೇನೆ. ಆದರೆ ಈ ನಿನ್ನ ಭವನವೇ ಸರ್ವಶ್ರೇಷ್ಠವಾಗಿದೆ.

ಇಕ್ಷ್ವಾಕು ವಂಶದಲ್ಲಿ ತ್ರಿಶಂಕು ಎಂಬ ರಾಜಶ್ರೇಷ್ಠನಿದ್ದನು. ಆ ವೀರ ತ್ರಿಶಂಕು ಅಯೋಧ್ಯಾನಗರಿಯ ರಾಜನಾಗಿದ್ದನು. ಕೇಕಯ ಕುಲದಲ್ಲಿ ಜನ್ಮವೆತ್ತಿದ ಸತ್ಯವತಿಯೇ ಅವನ ಧರ್ಮಪತ್ನಿ. ಈ ತ್ರಿಶಂಕು ಕುಮಾರನೇ ಲೋಕವಿಖ್ಯಾತ ಹರಿಶ್ಚಂದ್ರನು. ಜನೇಶ್ವರ ಕೇಳು: ಈ ಹರಿಶ್ಚಂದ್ರನು ಸ್ವರ್ಣವಿಭೂಷಿತ ಜೈತ್ರ ಎಂಬ ರಥವನ್ನೇರಿ ತನ್ನ ಶಸ್ತ್ರಪ್ರಭಾವದಿಂದ ಸಪ್ತದ್ವೀಪಗಳನ್ನು ಜಯಿಸಿ ರಾಜಸೂಯ ಎಂಬ ಮಹಾಯಜ್ಞವನ್ನು ಅನುಷ್ಠಾನಮಾಡಿದ್ದನು. ಅವನ ಆಜ್ಞೆಯಂತೆ ಭೂಮಂಡಲದ ಸಮಸ್ತ ರಾಜರು ಧನಕನಕಗಳನ್ನು ತಂದು ಅರ್ಪಿಸಿದ್ದರು. ಹರಿಶ್ಚಂದ್ರನು ಈ ವಿಪುಲ ಧನವನ್ನು ಯಜ್ಞಕಾರ್ಯದಲ್ಲಿ ನೆರೆದ ಬ್ರಾಹ್ಮಣರಿಗೆ ದಾನವಿತ್ತನು. ಬ್ರಾಹ್ಮಣರು ಹರಿಶ್ಚಂದ್ರನನ್ನು ಹರಸಿ ಆಶೀರ್ವದಿಸಿದರು. ಆದ್ದರಿಂದ ಅವನು ಮಹಾಯಶಸ್ವಿ ಮತ್ತು ತೇಜಸ್ವಿಯಾದ ರಾಜೇಂದ್ರನಾದನು. ಮಹಾಯಜ್ಞವು ಸಮಾಪ್ತಿಯಾದ ಮೇಲೆ ಅವನು ಸಮ್ರಾಟನಾಗಿ ಅಭಿಷಿಕ್ತನಾದನು.

"ಕೌರವನಂದನ ಕುಂತೀ ಕುಮಾರ! ಹರಿಶ್ಚಂದ್ರನ ವೈಭವನ್ನು ತಿಳಿದು ನಿಮ್ಮ ತಂದೆ ಪಾಂಡುವು ನಿನಗೆ ಈ ಸಂದೇಶವನ್ನು ಕಳುಹಿಸಿರುವನು. ಅದೇನೆಂದರೆ ಭಾರತ! ನಿನ್ನೆಲ್ಲಾ ತಮ್ಮಂದಿರರು ನಿನ್ನ ಆಜ್ಞಾಧೀನರಾಗಿ ವರ್ತಿಸುತ್ತಿದ್ದಾರೆ. ನೀನು ಈ ಸಮಗ್ರ ಪೃಥ್ವಿಯನ್ನು ಜಯಿಸಿ ರಾಜಸೂಯ ಯಜ್ಞವನ್ನು ಮಾಡಬೇಕು. ನಿನ್ನ ದ್ವಾರ ಯಜ್ಞವು ಸಂಪನ್ನವಾದರೆ, ನಾನು ಇಂದ್ರಭವನದಲ್ಲಿ ಹರಿಶ್ಚಂದ್ರನಂತೆ ದೀರ್ಘಕಾಲ ಆನಂದವನ್ನು ಅನುಭವಿಸುವೆನು." ಈ ಪ್ರಕಾರ ನಿಮ್ಮ ಜನಕನು ನನ್ನೊಡನೆ ನಿವೇದಿಸಲಾಗಿ ನಾನು ಭೂಲೋಕಕ್ಕೆ ಹೋಗಿ ನಿನ್ನ ಪುತ್ರ ಯುಧಿಷ್ಠಿರನಿಗೆ ಹೇಳುತ್ತೇನೆ ಎಂದು ಬಂದಿರುವೆನು.

ಇದೇ ನನ್ನ ಕಾರ್ಯಾರ್ಥವು. ರಾಜೇಂದ್ರ! ವಿಚಾರಮಾಡಿ ವರ್ತಿಸು. ಚಾತುರ್ವರ್ಣ್ಯವನ್ನು ಸರ್ವದಾ ರಕ್ಷಿಸುವುದರಲ್ಲಿ ಉದ್ಯುಕ್ತನಾಗಿರು. ನಾನು ದ್ವಾರಕೆಗೆ ಚಿತ್ತೈಸುವೆನು. ಹರಿನಾರಾಯಣ ಹರಿನಾರಾಯಣ ಎನ್ನುತ್ತಾ ನಾರದರು ಆಕಾಶಗಮನಿಯಾದರು.

ಧರ್ಮರಾಯನು ರಾಜಸೂಯ ಯಜ್ಞದ ವಿಚಾರ ಚಿಂತಿಸಿದನು. ಹರಿಶ್ಚಂದ್ರನ ಮಹಾತೇಜಸ್ಸನ್ನು, ವೈಭವವನ್ನು ಕೇಳಿ ಮನಸ್ಸಿನಲ್ಲಿ ರಾಜಸೂಯ ಯಜ್ಞದ ಇಚ್ಛೆಯು ಮೊಳೆಯಿತು. ರಾಜಸಭೆಯಲ್ಲಿ ಯುಧಿಷ್ಠಿರನು ಈ ಪ್ರಕಾರ ವಿಚಾರಿಸಿದನು: "ಮಹಾತ್ಮರೆ! ರಾಜಸೂಯ ಎಂಬ ಯಜ್ಞವು ಸಮ್ರಾಟರಿಗೆ ಯೋಗ್ಯವಾಗಿದೆ ಈ ಯಜ್ಞವನ್ನು ನೆರವೇರಿಸುವ ವಿಚಾರದಲ್ಲಿ ನಿಮ್ಮ ಅಭಿಮತವೇನು?"

"ಧರ್ಮಜ್ಞ! ನೀವು ರಾಜಸೂಯ ಯಜ್ಞವನ್ನು ಮಾಡಲು ಯೋಗ್ಯರಾಗಿವಿರಿ" ಎಂದವರೆಲ್ಲರೂ ಅನುಮೋದಿಸಿದರು. ಆದರೆ ಶ್ರೀಕೃಷ್ಣನನ್ನು ಕೇಳದೆ ನಿರ್ಧರಿಸುವುದು ಉಚಿತವಲ್ಲವೆಂದು ಧರ್ಮರಾಯನು ಓರ್ವ ದೂತನನ್ನು ಕಳುಹಿಸಿದನು. ಯುಧಿಷ್ಠಿರ, ಧೌಮ್ಯರಾದಿ ಸರ್ವರೂ ತನ್ನ ದರ್ಶನಕಾಂಕ್ಷಿಗಳಾಗಿರುವರೆಂದು ಶ್ರೀಕೃಷ್ಣನು ದೂತನಿಂದ ಅರಿತು, ಇಂದ್ರಪ್ರಸ್ಥಕ್ಕೆ ಬಂದು ಅವರೆಲ್ಲರನ್ನು ಸಂದರ್ಶಿಸಿದನು.

"ಶ್ರೀಕೃಷ್ಣ! ನನಗೆ ರಾಜಸೂಯ ಯಜ್ಞವನ್ನು ಮಾಡಬೇಕೆಂಬ ಇಚ್ಛೆಯಾಗಿದೆ. ಇದನ್ನು ನೆರವೇರಿಸುವ ಭಾರವು ನಿನ್ನದು. ನಿನ್ನನ್ನು ಕೇಳದೆ ನಾನು ನಿರ್ಧರಿಸಿರುವುದಿಲ್ಲ. ಏನು ಮಾಡಬೇಕೆಂದು ಆಜ್ಞೆಯನ್ನೀಯು" ಎಂದು ಯುಧಿಷ್ಠಿರನು ಸವಿನಯ ವಚನಗಳಿಂದ ಪ್ರಾರ್ಥಿಸಿದನು.

"ಮಹಾರಾಜ! ನೀನು ಸರ್ವಸದ್ಗುಣ ಸಂಪನ್ನನು. ನೀನು ರಾಜಸೂಯ ಯಜ್ಞವನ್ನು ಮಾಡಲು ಯೋಗ್ಯನಾಗಿರುವಿ. ಆದರೆ ಈ ವಿಚಾರದಲ್ಲಿ ಒಂದು ಮಾಡಿದೆ. ಜರಾಸಂಧನು ಸಮಸ್ತ ಕ್ಷತ್ರಿಯ ಕುಲದ ರಾಜಲಕ್ಷ್ಮಿಯನ್ನು ಅಪಹರಿಸಿ ಸಮ್ರಾಟಪದವಿಯಲ್ಲಿ ಅಭಿಷಿಕ್ತನಾಗಿರುವನು. ಶಿಶುಪಾಲನು ಜರಾಸಂಧನ ಆಶ್ರಯವನ್ನು ಪಡೆದು ಅವನ ಪ್ರಧಾನ ಸೇನಾಪತಿಯಾಗಿರುವನು. ಮಹಾಪರಾಕ್ರಮಿಗಳಾದ ಹಂಸ ಮತ್ತು ಡಿಂಬಕರು ಜರಾಸಂಧನ ಶರಣಾಗತರಾಗಿರುವರು. ದಂತವಕ್ರ, ಕಂಭ ಮತ್ತು ಮೇಘವಾಹನ ಇವರೆಲ್ಲರೂ ಅವನ ಚರಣದಲ್ಲಿ ಶಿರಮಣಿದಿರುವರು. ಪೃಥ್ವಿಯ ನಾಲ್ಕನೇ ಭಾಗದ ಸ್ವಾಮಿಯಾಗಿ, ಪರಶುರಾಮನಿಗೆ ಸಮಾನಶೌರ್ಯ ಸಂಪನ್ನ

(9ನೇ ಪುಟಕ್ಕೆ ಮುಂದುವರಿದಿದೆ)

ಪ್ರಭಾತ

ಸಂಪುಟ: ೨೭. ಸಂಚಿಕೆ: ೩೬. 15-10-1961 Vol. XXVII. No. 36.

ಬಿಹಾರದ ಯಾತನೆ

ಈ ವರ್ಷ ಎರಡನೇ ಬಾರಿ, ಬಿಹಾರವು ನೆರೆಹಾವಳಿಯ ಯಾತನೆಗೊಳಗಾಯಿತು. ಕೇರಳ ರಾಜ್ಯದಷ್ಟು ದೊಡ್ಡ ಪ್ರದೇಶವು ಬಿಹಾರದಲ್ಲಿ ಮಹಾಪ್ರವಾಹದಲ್ಲಿ ಸಿಲುಕಿ, ಸಾವಿರ ಪ್ರಾಣಗಳು ನಷ್ಟವಾಗಿವೆ; ಲಕ್ಷಾಂತರ ಜನರು ಮನೆಮಠಗಳನ್ನು ಕಳಕೊಂಡಿದ್ದಾರೆ. ಪಾಟ್ನಾ, ಮೊಂಘೀರ, ಗಯಾ, ಮುಝಫ್ಫಾರಪುರ, ದರ್ಭಾಂಗಾ— ಈ ಜಿಲ್ಲೆಗಳಲ್ಲಿ ವಿಶೇಷ ತರದ ಹಾನಿಯಾಗಿದೆ. ಕೆಲ ತಿಂಗಳ ಹಿಂದೆ ಬಂದ ನೆರೆಯಲ್ಲಿ ಪ್ರಾಣನಷ್ಟಕ್ಕಿಂತಲೂ ವಿತ್ತಹಾನಿ ಹೆಚ್ಚಿತ್ತು; ಆ ಮೇಲೆ ಅನಾವೃಷ್ಟಿಯು ಒಂದು ಬಂತು— ಆ ಪ್ರದೇಶದಲ್ಲಿ, ಬೆಳೆಗೆ ವಿಶೇಷ ನಷ್ಟವನ್ನು ತಂದೊಡ್ಡಿತು. ಅಳಿದುಳಿದುದನ್ನು ಕಳೆದ ಕೆಲದಿನಗಳ ನೆರೆಯು ಕೊಚ್ಚಿಕೊಂಡು ಹೋಗಿದೆ. ನೆರೆಯ ಮೊದಲೇ ವಾಂತಿಭೇದಿಯೂ ಅಲ್ಲಿಯ ಹದಿಮೂರು ಜಿಲ್ಲೆಗಳಲ್ಲಿ ಹರಡಿತ್ತು ಮತ್ತು ಎರಡೂವರೆ ಸಾವಿರದಷ್ಟು ಜನರು ಆ ಸಾಂಕ್ರಾಮಿಕ ರೋಗಕ್ಕೆ ಬಲಿಯಾಗಿದ್ದರು. ಅಧಿಕಾರಿಗಳು ವಿಚಕ್ಷಣತೆಯಿಂದ ಈ ಮಾರಕ ರೋಗವನ್ನು ಕಾದಾಡಿ, ಹದಿಮೂರರಲ್ಲಿ ಒಂಭತ್ತು ಜಿಲ್ಲೆಗಳಲ್ಲಿ ಅದನ್ನು ಹತೋಟಿಗೆ ತಂದಿದ್ದರು. ಈಗ, ಈ ಎರಡನೇ ನೆರೆಯ ಬೆನ್ನಲ್ಲಿ ಆ ರೋಗವು ಪುನಃ ತಲೆಯೆತ್ತಿ ಉಲ್ಬಣಗೊಳ್ಳುವುದು ಸಾಧ್ಯವಿದೆ. ಬಿಹಾರ ರಾಜ್ಯವು, ಕಾಲು ಶತಮಾನದ ಹಿಂದೆ ಸಹಿಸಿದ ಭೂಕಂಪಾನಂತರದ ಕಷ್ಟಗಳಿಗಿಂತಲೂ ಅಧಿಕವಾಗಿ ಈಗ ಯಾತನೆಯನ್ನನುಭವಿಸುತ್ತಿದೆ. ಈ ಸಂಕಷ್ಟದಲ್ಲಿ ಕೇಂದ್ರ ಸರಕಾರವು ನೀಡುವ ಸಹಾಯಕ್ಕೆ ಸಹ ಒಂದು ಮಿತಿಯಿದೆ. ಬಲ್ಲಿದರೆನಿಸಿದ ಜನರೇ ಈಗ ಹೆಚ್ಚಿನ ನೆರವು ನೀಡಬೇಕಾಗಿದೆ.

——

ಡಾ| ಪಿ. ಸುಬ್ಬರಾಯನ್‌ರವರ ಜಿಲ್ಲಾ ಸಂಚಾರ ಕಾರ್ಯಕ್ರಮ

ಕೇಂದ್ರ ಸರಕಾರದ ಸಾರಿಗೆ ಮಂತ್ರಿ ಡಾ| ಪಿ. ಸುಬ್ಬರಾಯನ್‌ರವರು ತಾ. 16ರಲ್ಲಿ (ನಾಳೆ) ಮಂಗಳೂರಿಗೆ ಆಗಮಿಸಿ, ಸಾಯಂಕಾಲ 4ಕ್ಕೆ ಮಂಗಳೂರು ನಗರಸಭೆಯ ಪೌರ ಸ್ವಾಗತವನ್ನು ಸ್ವೀಕರಿಸಿ, 5ಕ್ಕೆ ಮಂಗಳೂರಿನ ಹೊಸ ಆಟೋ ಟೆಲಿಫೋನ್ ಎಕ್ಸ್‌ಚೇಂಜ್ ಕಟ್ಟಡದ ಶಂಖುಸ್ಥಾಪನೆ ಮಾಡಿ 7ಕ್ಕೆ ಬಿಸೆಂಟ್ ಶಾಲೆಯಲ್ಲಿ ಲಾಯನ್ಸ್ ಕ್ಲಬ್ಬಿನ ವಾರ್ಷಿಕ ಮಹೋತ್ಸವದಲ್ಲಿಯೂ ಭೋಜನಸತ್ಕಾರದಲ್ಲಿಯೂ ಭಾಗವಹಿಸುವರು. ಮರುದಿನ (ತಾ. 17) ಪೂರ್ವಾಹ್ನ 9-30ಕ್ಕೆ ಬಾವಟೆಗುಡ್ಡೆಯಲ್ಲಿ ಕಾರ್ನಾಡ್ ಸದಾಶಿವರಾವ್ ಗ್ರಂಥಾಲಯ ಕಟ್ಟಡದ ಶಂಖುಸ್ಥಾಪನೆ ಮಾಡಿ 10-30ಕ್ಕೆ ಮಂಗಳೂರಿನ ಟಪ್ಪಾಲು ಮತ್ತು ತಂತಿ ಆಫೀಸುಗಳನ್ನು ಸಂದರ್ಶಿಸುವರು; ಸಾಯಂಕಾಲ 4ರಿಂದ 5ರ ವರೆಗೆ ಮಂಗಳೂರು ಬಂದರ ಸಂದರ್ಶನ; ರಾತ್ರೆ 8ಕ್ಕೆ ಕೆನರಾ ಚೇಂಬರ್ ಒಫ್ ಕೊಮರ್ಸಿನಲ್ಲಿ ಭೋಜನಸತ್ಕಾರ. ತಾ. 18ರಲ್ಲಿ ಪೂರ್ವಾಹ್ನ 10ಕ್ಕೆ ಸುರತ್ಕಲ್ಲಿನ ಕರ್ಣಾಟಕ ರಿಜನಲ್ ಇಂಜಿನಿಯರಿಂಗ್ ಕೊಲೇಜಿನ ಸಂದರ್ಶನ. ಸಾಯಂಕಾಲ 4-20ಕ್ಕೆ ರೊಟರಿ ಕ್ಲಬ್ಬಿನಲ್ಲಿ ಚಹಾಸತ್ಕಾರ. 6-50ಕ್ಕೆ ಮಂಗಳೂರಿನಿಂದ ಹೊರಡುವರು.

——

ಮಂಗಳೂರಿಗೆ ಹೊಸ ಸ್ವಯಂಚಾಲಿತ ಟೆಲಿಫೋನ್ ಎಕ್ಸ್‌ಚೇಂಜ್ ಕಟ್ಟಡ

ಮಂಗಳೂರಿನಲ್ಲಿ ಮೂವತ್ತೆಂಡೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ಹೊಸ ಸ್ವಯಂಚಾಲಿತ ಟೆಲಿಫೋನ್ ಎಕ್ಸ್‌ಚೇಂಜ್ ಕಟ್ಟಡವು ಕಟ್ಟಿಸಲ್ಪಡುವುದು. ಈ ಕಟ್ಟಡದ ಶಂಖುಸ್ಥಾಪನಾ ಸಮಾರಂಭವು, ನಾಳೆ (ತಾ. 16) ಸಾಯಂಕಾಲ 5ಕ್ಕೆ, ಟೆಲಿಫೋನ್ ಎಕ್ಸ್‌ಚೇಂಜ್ ಮಠಾರದಲ್ಲಿ ಕೇಂದ್ರದ ಸಾರಿಗೆಮಂತ್ರಿ ಡಾ| ಪಿ. ಸುಬ್ಬರಾಯನ್‌ರವರಿಂದ ನೆರವೇರುವುದು. ಮೈಸೂರು ಸರಕಾರದ ಕಾನೂನು ಹಾಗು ಕಾರ್ಮಿಕ ಮಂತ್ರಿ ಶ್ರೀ| ಬಿ ವೈಕುಂಠ ಬಾಳಿಗರವರು ಈ ಸಮಾರಂಭದ ಅಧ್ಯಕ್ಷತೆ ವಹಿಸುವರು.

(ಈ ಹೊಸ ಕಟ್ಟಡವು 10,000ಗಳಷ್ಟು ಟೆಲಿಫೋನ್‌ಗಳ ಸೌಕರ್ಯಕ್ಕಾಗಿ ಯೋಜಿಸಲ್ಪಡುತ್ತಿದೆ. ಆರಂಭದಲ್ಲಿ 2,000 ಲೈನುಗಳನ್ನು ಸಂಯೋಜಿಸಲಾಗುವುದು. 1962ರಲ್ಲಿ ಇದರ ಕೆಲಸವು ಆರಂಭವಾಗಿ, 1963ರೊಳಗೆ ಮುಗಿವುದು.

——

ಜಿಲ್ಲಾ ನಾಟಕ ಸ್ಪರ್ಧೆಯ ಫಲಿತಾಂಶ

ಮಂಗಳೂರು ಮಿಶ್ಯನ್ ಹೈಸ್ಕೂಲಿನಲ್ಲಿ ಸಂಗೀತ ನಾಟಕ ಎಕೆಡೆಮಿಯವರು ನಡೆಸಿದ ನಾಟಕ ಸ್ಪರ್ಧೆಯಲ್ಲಿ, ಮಂಗಳೂರಿನ ಕದ್ರಿ ಡಿಬೇಟಿಂಗ್ ಸೊಸೈಟಿಯವರ "ಸಮರ ಸನ್ನಾಹ" ನಾಟಕಕ್ಕೆ ಪ್ರಥಮ ಬಹುಮಾನವು ಸಾರಲ್ಪಟ್ಟಿದೆ. ಈ ನಾಟಕವನ್ನು ಬರೆದು ದಿಗ್ದರ್ಶಿಸಿದವರು ಶ್ರೀ| ಕೀರಾನ ರಾಮಚಂದ್ರರವರು.

ದ್ವಿತೀಯ ಬಹುಮಾನವು, ಕುಂದಾಪುರದ "ರೂಪರಂಗ"ದವರ "ಟಿಪ್ಪು ಸುಲ್ತಾನ್" ನಾಟಕಕ್ಕೆ ದೊರೆತಿದೆ. ಈ ನಾಟಕವನ್ನು ಬರೆದವರು ಮುಂಬಯಿಯ ಶ್ರೀ| ಆರ್. ಡಿ. ಕಾಮತರವರು

ಈ ಬಾರಿ, ಸ್ಪರ್ಧೆಗೆ ಮೂರು ನಾಟಕಗಳು ಮಾತ್ರ ಬಂದಿದ್ದುವು. ಪ್ರಥಮ ದಿನ ರೂಪರಂಗದವರ "ಟಿಪ್ಪು ಸುಲ್ತಾನ್" ನಾಟಕವೂ, ಎರಡನೇ ದಿನ ಸುರತ್ಕಲ್ಲಿನ ಗೆಳೆಯರ ಬಳಗದವರಿಂದ "ಯಜ್ಞಮನಾಯಕ"ವೂ, ಮೂರನೇ ದಿನ ಕದ್ರಿ ಡಿಬೇಟಿಂಗ್ ಸೊಸೈಟಿಯವರಿಂದ "ಸಮರ ಸನ್ನಾಹ" ನಾಟಕವೂ ಅಭಿನಯಿಸಲ್ಪಟ್ಟಿದ್ದುವು. ಕೊನೆಯ ದಿನ, ಎಕೆಡೆಮಿಯ ಕಾರ್ಯದರ್ಶಿ ಶ್ರೀ| ಕೆ. ಎಸ್. ಉಡುಪರವರು ಧನ್ಯವಾದಗಳನ್ನರ್ಪಿಸಿದರು. ——

ಕೆನರಾ ಬೇಂಕಿನ 'ಬುಕ್ ಬೇಂಕ್ ಸರ್ವಿಸಿ'ನ ಉದ್ಘಾಟನೆ

ಕೆನರಾ ಬೇಂಕ್ ಜುಬಿಲಿ ಎಡ್ಯುಕೇಶನ್ ನಿಧಿಯ ವತಿಯಿಂದ ನಡೆಸಲ್ಪಡುವ 'ಬುಕ್ ಬೇಂಕ್ ಸರ್ವಿಸಿ'ನ ಉದ್ಘಾಟನೆಯು, ಈ ದಿನ (ತಾ. 15-10-61) ಪೂರ್ವಾಹ್ನ 10ಕ್ಕೆ, ಮಂಗಳೂರಿನ ಬಾವಟೆಗುಡ್ಡೆಯಲ್ಲಿರುವ ಕೆನರಾ ಬೇಂಕ್ ಕಟ್ಟಡದಲ್ಲಿ, ಸುರತ್ಕಲ್ ಇಂಜಿನಿಯರಿಂಗ್ ಕೊಲೇಜಿನ ಪ್ರಿನ್ಸಿಪಾಲರಾಗಿರುವ ಡಾ| ಎ ಎಸ್. ಅಡ್ಕೆಯವರಿಂದ ಉದ್ಘಾಟಿಸಲ್ಪಡುವುದು. ಜಸ್ಟಿಸ್ ಶ್ರೀ| ಎ. ನಾರಾಯಣ ಪೈಯವರು ಈ ಸಮಾರಂಭದ ಅಧ್ಯಕ್ಷತೆ ವಹಿಸುವರು.

——

ಡಾ| ಸುಬ್ಬರಾಯನ್‌ರವರಿಗೆ ಪೌರಸ್ವಾಗತ

ಮಂಗಳೂರಿಗೆ ಆಗಮಿಸುವ ಭಾರತ ಸರಕಾರದ ಸಾರಿಗೆ ಮಂತ್ರಿ ಡಾ| ಪಿ. ಸುಬ್ಬರಾಯನ್‌ರವರಿಗೆ, ನಾಳೆ (ತಾ. 16ನೇ ಸೋಮವಾರ) ಅಪರಾಹ್ನ 4ಕ್ಕೆ, ನಗರಸಭೆಯ ವತಿಯಿಂದ ಪೌರಸ್ವಾಗತ ನಡೆವುದು. ——

ಸಿಂಡಿಕೇಟ್ ಬೇಂಕಿನ ಕಾಸರಗೋಡು ಶಾಖೆಯ ರಜತೋತ್ಸವ

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಕಾಸರಗೋಡು ಶಾಖೆಯ ರಜತೋತ್ಸವ ಸಮಾರಂಭವೂ, ಈ ಬೇಂಕಿನ ಕಾಸರಗೋಡು ಶಾಖೆಯ ಹೊಸ ಕಟ್ಟಡದ ಶಂಖುಸ್ಥಾಪನಾ ಸಮಾರಂಭವೂ, ನಾಳೆ (ತಾ. 16) ಕಾಸರಗೋಡಿನಲ್ಲಿ ಜರಗುವುದು. ಜಸ್ಟಿಸ್ ಶ್ರೀ| ಎ. ನಾರಾಯಣ ಪೈಯವರು ಶಂಖುಸ್ಥಾಪನೆ ಮಾಡುವರು; ಕೇರಳ ಸರಕಾರದ ಕಾನೂನು ಮತ್ತು ಕಂದಾಯ ಮಂತ್ರಿ ಶ್ರೀ| ಕೆ. ಚಂದ್ರಶೇಖರನ್‌ರವರು ಅಧ್ಯಕ್ಷತೆ ವಹಿಸುವರು.

——

ನಮ್ಮ ಜಿಲ್ಲೆ

ಮುಷ್ಕರ ಹಿಂತೆಗೆದರು: ದ. ಕ. ಜಿಲ್ಲಾ ನೇಕಾರರ ಸಂಘವು ಮಂಗಳೂರು ನೈಗೆ ಕೆಲಸಗಾರರ ಕೇಳಿಕೆಗಳನ್ನು ಮುಂದಿಟ್ಟುಕೊಂಡು ತಾ. 9ರಿಂದ ಮುಷ್ಕರ ಹೂಡುವ ಕರೆಕೊಟ್ಟಿತ್ತು. ಮೈಸೂರಿನ ಅಸಿಸ್ಟ್ಯಾಂಟ್ ಲೇಬರ್ ಕಮಿಶನರರು ನೈಗೇ ಮಾಲಕ ಮತ್ತು ಮಜೂರರೊಳಗಿನ ವಿವಾದವನ್ನು ಕನ್ಸಿಲಿಯೇಶನ್ ಬಗ್ಗೆ ಅಕ್ಟೋಬರ್ 20ಕ್ಕೆ ನೋಟೀಸು ಕೊಟ್ಟಿರುವುದನ್ನು ಗಮನಿಸಿ ಮುಷ್ಕರ ಹಿಂತೆಗೆದಿರುವರಾಗಿ ತಿಳಿಯಲಾಗಿದೆ.

ಮೊಗವೀರ ಸಹಕಾರ ಸಂಘ: ಮಂಗಳೂರು ಮೊಗವೀರ ಸಹಕಾರೀ ಸಂಘದ ಆಡಳಿತ ಮಂಡಳಿಯ ಸಭೆಯೊಂದು ತಾ. 7ರಂದು ಸಂಜೆ ಸಂಘದ ಕಚೇರಿಯಲ್ಲಿ ಜರಗಿದಾಗ ಮುಂದಿನ ವರ್ಷಕ್ಕೆ ಶ್ರೀಗಳಾದ ಎಂ. ಎಸ್. ದಯಾಕರ್ ಅಧ್ಯಕ್ಷರಾಗಿಯೂ ವಾಸುದೇವ ಬೋಳೂರ್‌ರವರು ಕಾರ್ಯದರ್ಶಿಯಾಗಿಯೂ ಅವಿರೋಧ ಆಯ್ಕೆಗೊಂಡಿರುವರು.

ದಸರಾ ಪಂದ್ಯಕ್ಕೆ ಮಂಗಳೂರಿನವರು: ಮೈಸೂರು ದಸರಾ ಪಂದ್ಯಾಟಗಳ ಡಿವಿಜನಲ್ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಮಂಗಳೂರಿನ ವಿವಿಧ ಶಾಲೆಗಳ ಪರವಾಗಿ 33 ಮಂದಿ ಕ್ರೀಡಾಪಟುಗಳು ತಾ. 8ರಂದು ಬೆಳಿಗ್ಗೆ ಸ್ಪೆಶಲ್ ಬಸ್ ಮೂಲಕ ಮೈಸೂರಿಗೆ ತೆರಳಿರುವರು; ದಸರಾ ಸ್ಪರ್ಧೆಯ ಅಂಗವಾಗಿ ಜರಗುವ ಕಬಡಿ ಪಂದ್ಯಾಟ ಮತ್ತು ದೇಹ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ಸಲುವಾಗಿ ಬಾಲಮಾರುತಿ ವ್ಯಾಯಾಮ ಮಂಡಲದವರೂ ಅದೇ ದಿನ ಮೈಸೂರಿಗೆ ತೆರಳಿರುವರು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಂಗಳೂರವರು: ಮೈಸೂರು ದಸರಾ ಸಂಬಂಧವಾಗಿ ಮೈಸೂರು ಟೌನ್‌ಹೋಲ್‌ನಲ್ಲಿ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಂಗಳೂರಿನ ಕಲಾವಿದ ಶ್ರೀ| ಬಿ. ವಿ ಬಾಳಿಗರು ತಾ. 18—16—61ನೇ ಬುಧವಾರ ಬೆಳಿಗ್ಗೆ 9-30ರಿಂದ 10-00ರ ವರೆಗೆ ಕನ್ನಡ ಭಾವಗೀತಗಳ ಕಾರ್ಯಕ್ರಮ ಕೊಡಲು ಆರಿಸಲ್ಪಟ್ಟಿದ್ದಾರೆ.

ಐರೋಪ್ಯ ಪ್ರವಾಸದಿಂದ ಮರಳಿದರು: ರೆವರೆಂಡ್ ಫಾದರ್ ಜೋರ್ಜ್ ಪ್ರೋಕ್ಸ್‌ರವರ ನೇತೃತ್ವದಲ್ಲಿ ಮಂಗಳೂರಿನ ಹಾಗು ಮುಂಬಾಯಿಯ ಕಲಾವಿದರ ಸಾಂಸ್ಕೃತಿಕ ಪಂಗಡದ ನೃತ್ಯ ನಿರ್ದೇಶಕರಾಗಿ ಕಳೆದ ಮೇ ತಿಂಗಳಲ್ಲಿ ಐರೋಪ್ಯ ರಾಷ್ಟ್ರಗಳ ಪ್ರವಾಸ ಕೈಕೊಂಡಿದ್ದ ಮಂಗಳೂರಿನ ನೃತ್ಯಕಲಾವಿದ, ನೃತ್ಯಕಲಾನಿಪುಣ ಶ್ರೀ| ರಾಜನ್ ಅಯ್ಯರ್‌ರವರು ಕಳೆದ ತಿಂಗಳಾಂತ್ಯದಲ್ಲಿ ಸ್ವದೇಶಕ್ಕೆ ಮರಳಿರುವರು. ಪಶ್ಚಿಮ ಜರ್ಮನಿಯ ರೀವಾ ಸ್ಟುಡಿಯೋದಲ್ಲಿ ಶ್ರೀ| ರಾಜನ್ ಅಯ್ಯರರ ನಿರ್ದೇಶಕತ್ವದಲ್ಲಿ ಭಾರತೀಯ ಸಂಪ್ರದಾಯಿಕ ನೃತ್ಯಗಳನ್ನೂ ಬೈಬಲ್ ಕಥೆಗಳ ಕೆಲವು ದೃಶ್ಯಗಳನ್ನೂ ಒಂದು ಗಂಟೆಯ ಅವಧಿಯ ಛಾಯಾಚಿತ್ರಗ್ರಹಣಗೈಯ್ಯಲಾಗಿದೆಯೆಂದು ತಿಳಿದುಬರುತ್ತದೆ.

ತರಬೇತಿ ಶಿಬಿರ: ಲೋಕಸೇವಾ ವೃಂದ, ಅಳಿಕೆ ಈ ಸಂಸ್ಥೆಯ ವತಿಯಿಂದ ಶಾರೀರಿಕ ಹಾಗು ಮಾನಸಿಕ ತರಬೇತಿ ಶಿಬಿರವೊಂದು ಕಳೆದ ತಾ. 8—10—61ರಿಂದ ತಾ. 12—10—61ರ ವರೆಗೆ ಕನ್ಯಾನದ ಬೋರ್ಡು ಹೈಸ್ಕೂಲಿನ ಪರಿಸರದಲ್ಲಿ ನಡೆಯಿತು.

ಶಂಕುಸ್ಥಾಪನೆ: ಸುರತ್ಕಲ್ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕೊಲೇಜ್ ಹೊಸ್ಟೇಲು ಕಟ್ಟಡದ ದ್ವಿತೀಯ ವಿಭಾಗದ ಕಟ್ಟಡಕ್ಕೆ ಶಂಕುಸ್ಥಾಪನೆಯು ಕಳೆದ ತಾ. 8ರಂದು ಮೈಸೂರು ಸರಕಾರದ ಶಿಕ್ಷಣಸಚಿವ ಶ್ರೀ| ಅಣ್ಣಾರಾವ್ ಗಣಮುಖಿಯವರಿಂದ ನಡೆಯಿತು. ಈ ಸಂದರ್ಭದಲ್ಲಿ ಭಾಷಣಮಾಡುತ್ತ ಮಾನ್ಯ ಸಚಿವರು "ದೇಶವನ್ನು ಭದ್ರ ತಳಹದಿಯಲ್ಲಿ ಕಟ್ಟುವಲ್ಲಿ ಇಂಜಿನಿಯರರ ಪಾತ್ರ ಬಹಳ ಪ್ರಾಮುಖ್ಯವಾದುದು. ಪ್ರಗತಿಪಥದಲ್ಲಿ ಮುಂದುವರಿಯುತ್ತಿರುವ ಭಾರತಕ್ಕೆ ಇಂದು ಇಂಜಿನಿಯರರ ಆವಶ್ಯಕತೆ ತುಂಬಾ ಇದೆ. ಇಂಜಿನಿಯರಿಂಗ್ ಕೊಲೇಜ್‌ದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಕೇವಲ ಇಂಜಿನಿಯರಿಂಗ್ ಪಾಸಾಗುವುದರ ಕಡೆಗೆ ಮಾತ್ರ ಗಮನಕೊಡದೆ, ಸಂಶೋಧನಾ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು" ಎಂದು ಕರೆಯಿತ್ತರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲೆಯ ಪ್ರಸಿದ್ಧ ಕೈಗಾರಿಕೋದ್ಯಮಿ ಶ್ರೀ| ವಿ. ಎಸ್. ಕುಡ್ವರು ವಹಿಸಿದ್ದರು.

ಪ್ರೊ| ಮಧೋಕ್ ಮಂಗಳೂರಲ್ಲಿ: "ಭಾರತದಲ್ಲಿ ಜಾತೀಯತೆಯ ಬೆಳವಣಿಗೆಗೆ ಕೊಂಗ್ರೆಸ್ಸಿನ ವಿಚ್ಛಿದ್ರಕಾರೀ ಧೋರಣೆಯೇ ಕಾರಣವಾಗಿದೆ. ರಾಷ್ಟ್ರದ ಅಖಂಡತೆ ಮತ್ತು ಐಕ್ಯ ಸಾಧಿಸಲು ಜನರು ಕೊಂಗ್ರೆಸ್ಸನ್ನು ಅಧಿಕಾರದಿಂದ ಉರುಳಿಸಬೇಕು" ಎಂಬುದಾಗಿ ದೆಹಲಿ ಜನಸಂಘದ ಅಧ್ಯಕ್ಷ ಪ್ರೊ| ಬಲರಾಜ್ ಮಧೋಕ್‌ರವರು ಕಳೆದ ತಾ. 11ರಂದು ಸಂಜೆ ಮಂಗಳೂರು ಕೇಂದ್ರ ಮೈದಾನಿನಲ್ಲಿ ಜನಸಂಘದ ಆಶ್ರಯದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ಹೇಳಿದರು. ಮೈಸೂರು ಪ್ರದೇಶ ಜನಸಂಘದ ಜೊತೆಕಾರ್ಯದರ್ಶಿ ಶ್ರೀ| ಕೆ. ರಾಮಭಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಕೇರಳ ಪ್ರವಾಸ ಮುಗಿಸಿ ಮೈಲುಬಂಡಿಯಲ್ಲಿ ಮಂಗಳೂರಿಗೆ ಬಂದ ಪ್ರೊ| ಮಧೋಕರನ್ನು ಸ್ಥಳೀಯ ಜನಸಂಘದ ಕಾರ್ಯಕರ್ತರುಗಳು ರೈಲ್ವೇ ನಿಲ್ದಾಣದಲ್ಲಿ ಭವ್ಯ ಸ್ವಾಗತವಿತ್ತು ಬರಮಾಡಿಕೊಂಡಿದ್ದರು. ಸಾರ್ವಜನಿಕ ಸಭೆಯ ನಂತರ ಶ್ರೀ| ಮಧೋಕರು ಗಣಪತಿ ಹೈಸ್ಕೂಲಿನ ಶಾರದಾಸದನದಲ್ಲಿ ಜಿಲ್ಲೆಯಾದ್ಯಂತದಿಂದ ಬಂದಿದ್ದ ಸುಮಾರು 700ಕ್ಕೂ ಮಿಕ್ಕಿ ಜನಸಂಘದ ಕಾರ್ಯಕರ್ತರನ್ನುದ್ದೇಶಿಸಿ ಭಾಷಣಮಾಡಿದ್ದರು.

ಜಿಲ್ಲಾ ಸಂಗೀತ ನೃತ್ಯ ಸ್ಪರ್ಧೆ: ದ. ಕ. ಜಿಲ್ಲಾ ಸಂಗೀತ ನಾಟಕ ಅಕಾಡಮಿಯ ವತಿಯಿಂದ ಏರ್ಪಡಿಸಲಾದ ಜಿಲ್ಲಾ ಮಟ್ಟದ ಸಂಗೀತ ಮತ್ತು ನಾಟ್ಯ ಸ್ಪರ್ಧೆಗಳು ಕಳೆದ ತಾ. 10ರಂದು ಮಂಗಳೂರು ಬಿ. ಇ. ಎಂ. ಹೈಸ್ಕೂಲಿನ ಸೆಂಟೆನರಿ ಸಭಾಸದನದಲ್ಲಿ ಜರಗಿದುವು. ಸ್ಪರ್ಧೆಯ ಫಲಿತಾಂಶಗಳು ಈ ಕೆಳಗೆ ಕೊಟ್ಟಂತಿವೆ:

ಸಂಗೀತ: 1. ಉಳ್ಳಾಲ ಆನಂದಾಶ್ರಮ ಹೈಸ್ಕೂಲಿನ ಮಾಸ್ಟರ್ ಸುರೇಶ ರೈ. 2. ಬಂಟ್ವಾಳ ಎಸ್. ವಿ. ಟಿ. ಹೈಸ್ಕೂಲಿನ ಕುಮಾರಿ ಡಿ. ವಸಂತಿ.

ನೃತ್ಯ: 1. ಮೂಡಬಿದ್ರೆ ಜೈನ್ ಹೈಸ್ಕೂಲಿನ ಕುಮಾರಿ ವಸುಂಧರಾದೇವಿ. 2. ಉಳ್ಳಾಲ ಆನಂದಾಶ್ರಮ ಹೈಸ್ಕೂಲಿನ ಕುಮಾರಿ ಧನ್ಯವತಿ.

ಮಂಗಳೂರು ಬಂದರದ ಅಭಿವೃದ್ಧಿ: ಮಂಗಳೂರನ್ನು ಸರ್ವಋತು ಬಂದರವನ್ನಾಗಿ ಪರಿವರ್ತಿಸುವ ಕಾರ್ಯಕ್ರಮದ ಪೂರ್ವಭಾವಿಯಾಗಿ ಕೆಲವು ದಿನಗಳಿಂದ ನಡೆಯುತ್ತಿದ್ದ ದೇದಿಷ್ಯ ಮರಳಿನ ನವೀನ ಪ್ರಯೋಗವು ಇದೀಗ ಮುಗಿದಿದ್ದು ಅದು ಯಶಸ್ವಿಯಾಗಿದೆಯಾಗಿ ತಿಳಿಯಲಾಗಿದೆ. ಪುಣೆಯ ಕೇಂದ್ರ ನೀರು, ವಿದ್ಯುತ್ ಮತ್ತು ಸಂಶೋಧನಾ ಕ್ಷೇತ್ರದ ಶ್ರೀ| ಎಂ. ಎಸ್. ಹೀರಾನಂದರ ನೇತೃತ್ವದಲ್ಲಿ ಈ ಪ್ರಯೋಗವನ್ನು ನಡೆಸಲಾಗುತ್ತಿತ್ತು.

ಸಿಟಿ ಯುವಕ ಕೊಂಗ್ರೆಸ್: ಮಂಗಳೂರು ಸಿಟಿ ಯುವಕ ಕೊಂಗ್ರೆಸ್ಸಿನ ಸಾಪ್ತಾಹಿಕ ಕಾರ್ಯಕ್ರಮವು ತಾ. 8ರಂದು ಜಿಲ್ಲಾ ಕೊಂಗ್ರೆಸ್ ಕಚೇರಿಯಲ್ಲಿ ಶ್ರೀ| ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿದಾಗ ಕೊಂಗ್ರೆಸ್ ಸೇವಾದಳದ ಜಿಲ್ಲಾ ಸಂಘಟಕ ಶ್ರೀ| ಪಿ. ಧರ್ಮರಾಜರು ಈ ತಿಂಗಳ ತಾ. 23, 24, 25ರಂದು ಮುಂಬಯಿಯಲ್ಲಿ ಜರಗಲಿರುವ ಸೇವಾದಳದ ರ್‍ಯಾಲಿಯ ಕುರಿತು ಭಾಷಣವಿತ್ತರು.

ಉಡುಪಿ ಅಧ್ಯಾಪಕರಿಗೆ ರಾಷ್ಟ್ರೀಯ ಪ್ರಶಸ್ತಿ: ಸಮಾಜಕ್ಕೆ ಪ್ರಶಂಸಾರ್ಹ ಸೇವೆ ಸಲ್ಲಿಸಿದ ಬಗ್ಗೆ ಭಾರತದ 84 ಮಂದಿ ಶಾಲಾಧ್ಯಾಪಕರಿಗೆ ರಾಷ್ಟ್ರೀಯ ಪ್ರಶಸ್ತಿಯು ಈ ತಿಂಗಳ ತಾ. 31ರಂದು ಡಿಲ್ಲಿಯಲ್ಲಿ ಜರಗಲಿರುವ ಒಂದು ವಿಶೇಷ ಸಮಾರಂಭದಲ್ಲಿ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರಿಂದ ವಿತರಣೆಯಾಗುವುದು. ಮೈಸೂರು ರಾಜ್ಯದ ಐದು ಮಂದಿ ಶಿಕ್ಷಕರು ಈ ಪ್ರಶಸ್ತಿಗೆ ಅರ್ಹರಾಗಿದ್ದು ಅವರಲ್ಲಿ ಉಡುಪಿಯ ಸಿ. ಬಿ. ಸಿ. ಜೆ. ಎಂ. ಮುನ್ಸಿಪಲ್ ಬೇಸಿಕ್ ಮತ್ತು ಹಾಯರ್ ಎಲಿಮೆಂಟರಿ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ| ಕೇಶವ ಕಾಮತರು ಒಬ್ಬರಾಗಿರುವರು.

ಬಾಲ ವಿಭಾಗದ ವಾರ್ಷಿಕೋತ್ಸವ: "ಧರ್ಮದ ಮೂಲವು ಸತ್ಯ. ಸತ್ಯವಿಲ್ಲದೆ ಧರ್ಮದ ಉದ್ಧಾರವು ಸಾಧ್ಯವಿಲ್ಲ, ಸತ್ಯದ ರಕ್ಷಣೆಯಾಗದೆ ಧರ್ಮದ ಪ್ರಚಾರವು ಸಾಧ್ಯವಾಗಲಾರದು. ಕಟ್ಟಿಗೆಯಲ್ಲಿರುವ ಬೆಂಕಿಯು ಹೇಗೆ ಮಥನವಿಲ್ಲದೆ ಪ್ರಜ್ವಲಿಸುವುದಿಲ್ಲವೋ ತದ್ರೀತಿ ಜನರಲ್ಲಿ ಅಡಗಿರುವ ಧಾರ್ಮಿಕ ಭಾವನೆಯನ್ನು ಪ್ರಜ್ವಲಿಸಲು ಉತ್ತಮ ಸದ್ಗುರುವಿನ ಆವಶ್ಯಕತೆಯಿದೆ. ಸದ್ಗುರುವು ಶಿಷ್ಯರು ಉತ್ತಮ ಮಾರ್ಗದಲ್ಲಿ ಹೋಗಲು ಸಹಾಯಕರಾಗಬೇಕು. ಭಾರತದ ಉದ್ಧಾರವಾಗಬೇಕಾದರೆ ಧಾರ್ಮಿಕ ಪ್ರಸಾರದ ಕಡೆಗೆ ಹೆಚ್ಚಿನ ಗಮನಕೊಡುವುದವಶ್ಯ" ಎಂಬುದಾಗಿ ಕಳೆದ ತಾ. 8ರಂದು ಸಂಜೆ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಜರಗಿದ ರಮಾದೇವಿಭಕ್ತ ಮಂಡಳಿಯ ಬಾಲ ವಿಭಾಗದ ದ್ವಿತೀಯ ವಾರ್ಷಿಕೋತ್ಸವದಲ್ಲಿ ಸದ್ಗುರು ಶ್ರೀ ರಮಾದೇವಿಯವರು ಪ್ರವಚನಗೈದರು.

ಮಕ್ಕಳ ಪರವಾಗಿ ಕುಮಾರರು ಸಹಿಲ್ ಸುವರ್ಣ, ಕೃಷ್ಣಮೂರ್ತಿ, ಕೆ. ರಾಮದಾಸ ಶೆಣೈ ಮತ್ತು ಕುಮಾರಿಯರು ಕಮಲಾ ಮಯ್ಯ, ಗೀತಾ ಕಾಮತ್, ಕೆ. ಕಸ್ತೂರಿ ಶೆಣೈ ಮತ್ತು ವಿಮಲಾ ಶೆಣೈಯವರು ಭಾಷಣಮಾಡಿದರು.

ಮಡಿಕೇರಿಯ ಜಿಲ್ಲಾ ನ್ಯಾಯಾಧೀಶ ಶ್ರೀ| ಚಿನ್ನರಾಯ ರೆಡ್ಡಿಯವರು ಈ ಕಾರ್ಯಕ್ರಮಕ್ಕೆ ಉಪಸ್ಥಿತರಿದ್ದು ಶ್ರೀ ಮಾತೆಯವರ ಪ್ರಥಮ ಸಂದರ್ಶನದ ತಮ್ಮ ಅನುಭವಗಳನ್ನು ವಿವರಿಸಿದರು.

ಕೊನೆಯಲ್ಲಿ ಶ್ರೀ ಗೋಪಾಲಕೃಷ್ಣ ನಾಯಕರು ಧನ್ಯವಾದವಿತ್ತರು.

ದ. ಕ. ಜಿಲ್ಲಾ ಯುವಕ ಕೊಂಗ್ರೆಸ್: ಇದರ ಮಹಾಸಭೆಯು ತಾ. 8ರಂದು ಜಿಲ್ಲಾ ಕೊಂಗ್ರೆಸ್ ಸಮಿತಿಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ| ಬಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ| ಯಂ. ರಾಮರಾಜ ಕಿಣಿಯವರನ್ನು ಪ್ರಧಾನ ಸಲಹೆಗಾರರನ್ನಾಗಿಯೂ, ಶ್ರೀ| ಯಂ. ಜಯಾನಂದ ದೇವಾಡಿಗರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು.

ಮಂಗಳೂರಲ್ಲಿ ನಾಡಹಬ್ಬ

ಕನ್ನಡ ಸಂಘದವರಿಂದ ಆಚರಣೆ

ಇದೇ ತಾ. 15ನೆಯ ರವಿವಾರ ಮತ್ತು 16ನೆಯ ಸೋಮವಾರ ಸಂಜೆ 5-30ಕ್ಕೆ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನ ಎಕೆಡಮಿ ಹಾಲಿನಲ್ಲಿ ಕನ್ನಡ ಸಂಘದ ಆಶ್ರಯದಲ್ಲಿ ನಾಡಹಬ್ಬವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು. ತಾ. 15ನೆಯ ಆದಿತ್ಯವಾರ ಸಂಜೆ 5-30ಕ್ಕೆ ಶ್ರೀ| ಆರ್. ಆರ್. ಉಮರ್ಜಿಯವರು ಉದ್ಘಾಟಿಸುವರು. ಶ್ರೀ| ಸೇಡಿಯಾಪು ಕೃಷ್ಣ ಭಟ್ಟರು 'ಆಧುನಿಕ ಕವಿತೆಗಳು' ಎಂಬ ವಿಷಯದ ಮೇಲೆ ಭಾಷಣಮಾಡುವರು. ಶ್ರೀ| ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಅಧ್ಯಕ್ಷತೆ ವಹಿಸುವರು. ಶ್ರೀ| ಕೆ. ಕೆ. ಅನಂತ ಶೆಣೈ ಮತ್ತು ಬಳಗದವರಿಂದ ವೇಣುವಾದನ ಕಛೇರಿ, ಸರಕಾರೀ ಕಾಲೇಜಿನ ವಿದ್ಯಾರ್ಥಿಗಳಿಂದ ವೃಂದಗಾನ, ಕುಮಾರಿ ಕೆ. ನಳಿನಿಯವರಿಂದ ಸಂಗೀತ, ಶ್ರೀ| ಆನಂದರಾಮ ಉಡುಪರಿಂದ ಕವಿತಾವಾಚನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ. ತಾ. 16ರ ಸಭೆಯ ಅಧ್ಯಕ್ಷತೆಯನ್ನು ಶ್ರೀ| ಎಸ್. ಆರ್. ರೋಹಿಡೆಕರರು ವಹಿಸುವರು. ಶ್ರೀ| ಪೆರ್ಲ ಕೃಷ್ಣ ಭಟ್ಟರು 'ಯಕ್ಷಗಾನ ಕಲೆ'ಯ ಕುರಿತು ಮಾತನಾಡುವರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಶ್ರೀ ವೃಷಭೇಂದ್ರ ಸ್ವಾಮಿಗಳು ಭಾಷಣಮಾಡುವರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ| ಗುಲ್ವಾಡಿ ರತ್ನಾಕರ ಭಟ್ಟರ ಶಿಷ್ಯವೃಂದದವರಿಂದ ವಾದ್ಯಗೋಷ್ಠಿ, ಕುಮಾರಿಯರಾದ ಶಾಂತ ಮತ್ತು ಸಬಿತಾ ಶರ್ಮರಿಂದ ಸಂಗೀತ, ಶ್ರೀ| ಅನ್ವಾರ್ ಖಾನರಿಂದ ಲಘುಸಂಗೀತ, ಚಲಚ್ಚಿತ್ರ ಪ್ರದರ್ಶನ ಇತ್ಯಾದಿಗಳಿವೆ. ಸರ್ವರೂ ಬಂದು ಸಹಕರಿಸಬೇಕೆಂದು ಕಾರ್ಯಕಾರೀ ಸಮಿತಿಯವರು ವಿನಂತಿಸಿಕೊಳ್ಳುತ್ತಾರೆ.

ಕುಂಬಳೆ ಅರಸರ ಚರಿತ್ರೆ

(ಕಳೆದ ವಾರದ 'ಪ್ರಭಾತ' ಸಂಚಿಕೆಯಲ್ಲಿ, ಕುಂಬಳೆ ಸೀಮೆಯ ಮಧುಪುರ ವಿಷ್ಣೇಶನ ವಿಷಯವಾಗಿ ಬರೆದ ಶ್ರೀ| ಕುಕ್ಕಿಲ ಕೃಷ್ಣಭಟ್ಟರವರು ಎರಡನೇ ಲೇಖಾಂಕವಾಗಿ ಕುಂಬಳೆ ಅರಸರ ಚರಿತ್ರವನ್ನು ತುಸು ಇಲ್ಲಿ ಕೊಟ್ಟಿರುವರು, ಈ ಲೇಖನದಲ್ಲಿ ಶ್ರೀ| ಭಟ್ಟರು, "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" ಎಂಬ ಪುಸ್ತಕದಿಂದ ಕೆಲವಂಶವನ್ನೆತ್ತಿ ಕೊಟ್ಟಿರುವರು)

(ಲೇಖಕ: ಕುಕ್ಕಿಲ ಕೃಷ್ಣ ಭಟ್ಟ)



ಕುಂಬಳೆ ಸೀಮೆಯ ಪ್ರಖ್ಯಾತ ಮಧೂರು ದೇವಸ್ಥಾನ

ದಿ| ಗಣಪತಿರಾವ್ ಐಗಳ್ ಎಂಬವರು 'ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ' ಎಂಬ ಪ್ರಸಿದ್ಧ ಚರಿತ್ರ ಗ್ರಂಥದ 33ನೆಯ ಅಧ್ಯಾಯದಲ್ಲಿರುವ 'ಕುಂಬಳೆ ಅರಸರು' ಎಂಬ ಪ್ರಕರಣದಿಂದ ಸಂಗ್ರಹಿಸಿದ ಭಾಗ:—

"ಈ ವಂಶದವರೂ ಕೊಚ್ಚಿ ರಾಜರ ಕುಟುಂಬದವರೂ ಒಂದೇ ವಂಶದವರಾಗಿರುತ್ತಾರೆ. ಇವರು ಉಪ್ಪಳ ಹೊಳೆಯ ದಕ್ಷಿಣದಿಂದ ಚಂದ್ರಗಿರಿಯ ಉತ್ತರಕ್ಕಿರುವ ಸೀಮೆಯಲ್ಲಿರುವ ಮಂಜೇಶ್ವರ ಮಾಗಣೆಯ ಒಂದು ಭಾಗವನ್ನೂ, ಕುಂಬಳೆ ಮಾಗಣೆ, ಅಡೂರು ಮಾಗಣೆ, ಪೆರ್ಡಾಲು ಮಾಗಣೆ, ಅಂಗಡಿಮೊಗರು ಮಾಗಣೆ, ಕಾಸರಗೋಡು ಮಾಗಣೆ, ಮೊಗ್ರಾಲು ಮಾಗಣೆಗಳನ್ನೂ; ಮಂಗಳೂರು ತಾಲೂಕಿನ ವಾಮಂಜೂರು ಮಾಗಣೆಯನ್ನೂ ಆಳಿಕೊಂಡಿದ್ದರು...... ಪೇಲಾಪುರವೆಂಬ ಐಲದೇವಸ್ಥಾನದ ಮಹಾತ್ಮ್ಯೆಯಲ್ಲಿಯೂ ಮಂಗಳೂರು ಶರಭೇಶ್ವರ ಗಣಪತಿ ದೇವಸ್ಥಾನದ ಮಹಾತ್ಮೆಯಲ್ಲಿಯೂ ಈ ವಂಶಜ ಮೂಲಪುರುಷರ ವಿಷಯ ಈ ಕೆಳಗೆ ಬರೆದ ರೀತಿಯಲ್ಲಿದೆ"—

"ಹಂಗಳದ ಕದಂಬ ವಂಶದ ರಾಜನಾದ ಕಾಮದೇವನು (ಇನ್ನೊಂದರ ಪ್ರಕಾರ ಮಯೂರವರ್ಮನು) ತನ್ನ ರಾಜ್ಯವನ್ನು ಸಂಚರಿಸಲು ಬಂದು ಕನ್ನಡ ಜಿಲ್ಲೆಯ ಒಳ ಅರಸುಗಳಿಂದ ಕಪ್ಪಕಾಣಿಕೆ ಪಡೆದು ಇಲ್ಲಿರುವ ಪುಣ್ಯಕ್ಷೇತ್ರಗಳನ್ನು ನೋಡಿ ಅನಂತರ ಕನ್ಯಾಕುಮಾರಿ ವರೆಗೆ ಯಾತ್ರಾರ್ಥಿಯಾಗಿ ಹೋದನು.......... ಒಂದು ದಿನ ಕುಂಬಳೆ ಹೊಳೆಯಲ್ಲಿ ಸ್ನಾನ ಮಾಡುವಾಗ ಅವನ ಮಗಳು ಗಂಧರ್ವ ಪೀಡೆಯಿಂದ ಮೂರ್ಛಿತಳಾದಳು. ಆಗ ಅದೇ ನದಿಯಲ್ಲಿ ಸ್ನಾನಕ್ಕಾಗಿ ಬಂದ ಒಬ್ಬ ಬ್ರಾಹ್ಮಣನು ಆ ಹುಡುಗಿಯನ್ನು ತನ್ನ ಮಂತ್ರಶಕ್ತಿಯಿಂದ ಸೌಖ್ಯಪಡಿಸಿದನು. ಆಗ ಕಾಮದೇವನು (ಮಯೂರವರ್ಮನು) ಸುಶೀಲೆಯನ್ನು ಆ ಬ್ರಾಹ್ಮಣನಿಗೆ ಮದುವೆ ಮಾಡಿ ಅವಳಿಗೆ ರಾಜ್ಯ ಬಿಟ್ಟುಕೊಟ್ಟನು. ಅದರ ಗಡಿಗಳು ಯಾವುವೆಂದರೆ-ಉತ್ತರದಲ್ಲಿ ನೇತ್ರಾವತಿ, ಪೂರ್ವದಲ್ಲಿ ಪಶ್ಚಿಮ ಘಟ್ಟಗಳು, ದಕ್ಷಿಣದಲ್ಲಿ ಪಯಸ್ವಿನೀ ನದಿ, ಪಶ್ಚಿಮದಲ್ಲಿ ಸಮುದ್ರ. ಈ ಸುಶೀಲೆಗೋಸ್ಕರ ಕುಂಬಳೆ ನದಿಯ ಎಡದಡದಲ್ಲಿ ಕೋಟೆಕಟ್ಟಿಸಿ ಕೋಟೆ ಮಧ್ಯ ಅರಮನೆ ಕಟ್ಟಿಸಿಕೊಟ್ಟನು..... ಸುಶೀಲೆಯು ಸ್ವಲ್ಪ ಸಮಯದ ಬಳಿಕ ಗರ್ಭಧರಿಸಿ ಒಂದು ಗಂಡು ಮಗುವನ್ನು ಹೆತ್ತಳು. ಆ ಮಗುವಿಗೆ ತನ್ನ ತಂದೆಯ ಕುಟುಂಬದ ಕದಂಬ ಅರಸರ ಹೆಸರಲ್ಲಿ ಒಂದಾದ 'ಜಯಸಿಂಹ'ನೆಂಬ ಹೆಸರನ್ನಿಟ್ಟಳು." ಆ ಮೇಲೆ ಜಯಸಿಂಹನು ಅರಸನಾಗಿ ತನ್ನ ರಾಜ್ಯಭಾರದಲ್ಲಿ ಕುಂಬಳೆಗೆ ದಂಡೆತ್ತಿ ಬಂದ ಪಾಂಡ್ಯ ರಾಜನನ್ನು ಯುದ್ಧದಲ್ಲಿ ಸೋಲಿಸುತ್ತಾನೆ. ಒಮ್ಮೆ ಸುಬ್ರಹ್ಮಣ್ಯ ಪ್ರಾಂತ್ಯದಲ್ಲಿ ಕಾಡು ಮೃಗಗಳ ಹಾವಳಿ ವಿಶೇಷವಾಗಿರಲು ಅಲ್ಲಿಗೆ ಬೇಟೆಗೆ ಹೋಗಿ ಬೇಟೆಯಾಡುವಾಗ ಪ್ರಮಾದವಶದಿಂದ ಉದ್ದಾಲಕನೆಂಬ ಬ್ರಾಹ್ಮಣನು ಇವನ ಬಾಣಕ್ಕೆ ಬಲಿಯಾಗುತ್ತಾನೆ. ಬ್ರಾಹ್ಮಣನ ಹೆಂಡತಿಯು 'ಸತೀ' ಹೋಗುತ್ತಾಳೆ. ಜಯಸಿಂಹನು ಈ ದುರ್ಘಟನೆಯ ಪರಿತಾಪದಿಂದ ಕಾವೇರೀ ನದಿ ತೀರದ ರಾಮಸ್ವಾಮಿ ಕಣಿವೆಯಲ್ಲಿ (ವ್ಯಾಘ್ರಪಾದ ಕ್ಷೇತ್ರ) ತಪಸ್ಸು ಮಾಡುತ್ತಿರುವಾಗ ಇತ್ತ ಕುಂಬಳೆ ಸೀಮೆಯಲ್ಲಿ ಆತನ ಮುಖ್ಯ ಸೇನಾಪತಿಯೂ ಭಾವನೆಂಟನೂ ಆಗಿದ್ದ ಮಂಜೇಶ್ವರದ ಹತ್ತಿರ 'ಬಡಾಜೆ' ಎಂಬಲ್ಲಿದ್ದ 'ಬಡಜ'ನು ಅದೇ ನೆರೆಯ ಪಟ್ಟಣದ ಮೊಗರು ಎಂಬಲ್ಲಿದ್ದ ಬಾಕುಡನೆಂಬ ಹೊಲೆಯ ಅರಸನೊಡನೆ ಸೇರಿಕೊಂಡು ಮಯೂರವರ್ಮನು ತಂದು ನಿಲ್ಲಿಸಿದ್ದ ಬ್ರಾಹ್ಮಣ ಕುಟುಂಬಗಳನ್ನು ಪೀಡಿಸತೊಡಗಿದರು. ಬ್ರಾಹ್ಮಣರ ದೂರು ಕೇಳಿ ಜಯವರ್ಮನು ಬಂದು ಅವರಿಬ್ಬರನ್ನು ಸೋಲಿಸಿ 'ಪಟ್ಟದಮೊಗರ'ನ್ನು ಸ್ವಾಧೀನಪಡಿಸಿ ವಾಮಂಜೂರಿನಲ್ಲಿ (ಉಪ್ಪಳಕ್ಕೆ ಸಮೀಪ) ತನ್ನ ತಮ್ಮನನ್ನು ಸೈನ್ಯಸಹಿತ ನಿಲ್ಲಿಸಿದನು.

"ಅನಂತರ ಐಲ (ಉಪ್ಪಳದ ಹತ್ತಿರ ಕುರ್ಚಿಪಳ್ಳ) ಗ್ರಾಮದಲ್ಲಿ 'ಅಂಬಾವನ'ದಲ್ಲಿ ಮಹಿಷಾಸುರಮರ್ದಿನಿ ಪ್ರತಿಮೆಯನ್ನು ಪ್ರತಿಷ್ಠಿಸಿ ಉಂಬಳಿ ಉತಾರ ಬಿಟ್ಟು ಅದರ ತಂತ್ರಿತ್ವದ ಕೆಲಸವನ್ನು ಅದೇ ಸಮಯದಲ್ಲಿ ಮಲೆಯಾಳದಿಂದ ಬಂದಿದ್ದ ಕೇಶವ ಎಂಬ ಬ್ರಾಹ್ಮಣ ಯತಿಯು ಬಹಳ ಬುದ್ಧಿವಂತನೆಂದು ತಿಳಿದು ಅವನಿಗೆ ಕೊಟ್ಟನು. ತನ್ನ ರಾಜ್ಯದಲ್ಲಿರುವ ಎಲ್ಲ ದೇವಸ್ಥಾನದ ತಂತ್ರಿತ್ವವನ್ನು ಅದೇ ಬ್ರಾಹ್ಮಣನಿಗೆ ಕೊಟ್ಟು ಅವನಿಗೆ ಬಡಾಜೆಯಲ್ಲಿ ನಿಲ್ಲಿಸಿ ಉಪ್ಪಳದಿಂದ ಉದ್ಯಾವರ ವರೆಗಿನ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಎಲ್ಲಾ ತರದ ಮಾನಮರ್ಯಾದೆಯನ್ನು ಕೊಟ್ಟನು."

"ಕುಂಬಳೆ ಅರಸರಿಗೆ ಪಟ್ಟ ಕಟ್ಟುವ ಕೆಲಸವನ್ನು ಈ ತಂತ್ರಿಗಳ ಕುಟುಂಬದವರೇ ಮಾಡಬೇಕು. ಈ ಪಟ್ಟಾಭಿಷೇಕವು ಕುಂಬಳೆ ಗೋಪಾಲಕೃಷ್ಣ ದೇವಸ್ಥಾನದಲ್ಲಿಯೇ ಆಗಬೇಕು. ಆ ದಿವಸ ಅರಸರು ಉಪವಾಸ ಇರಬೇಕು. ಪಟ್ಟವಾದ ಮೇಲೆ ಅರಸನು ಮಧೂರು ದೇವಸ್ಥಾನಕ್ಕೆ ಹೋಗಿ ಅಲ್ಲಿ ಬ್ರಾಹ್ಮಣ ಸಂತರ್ಪಣೆಯಾಗಿ ಅನಂತರ ಊಟ ಮಾಡಬೇಕು........"

"ಜಯಸಿಂಹನು ರಾಜ್ಯಭಾರ ಮಾಡಿಕೊಂಡಿರುವಾಗ, ಮಧ್ವಾಚಾರ್ಯರು ದ್ವೈತಮತವನ್ನು ಬೋಧಿಸುತ್ತಿರುವಾಗ ಅವರ ಮತದ ವಿಷಯ ಸ್ವಲ್ಪ ಅನುಭವ ಪಡೆಯಬೇಕೆಂದು 'ವಿಷ್ಣು ಮಂಗಲ'ಕ್ಕೆ (ಇದು ಕೂಡಲಿನ ನೆರೆಯಲ್ಲಿರುವ ಗ್ರಾಮ) ಮಧ್ವಾಚಾರ್ಯರನ್ನು ಕರೆಯಿಸಿದನು. ಕಾವುಗೋಳಿಯ ಸುಬ್ರಹ್ಮಣ್ಯ ಪಂಡಿತನ ಮಗನಾದ ತ್ರಿವಿಕ್ರಮ ಪಂಡಿತನು ಅದ್ವೈತ ಸಿದ್ಧಾಂತವನ್ನು ಓದಿಕೊಂಡು ಬಲು ಸಮರ್ಥನಾಗಿದ್ದನು. ಮತಸಂಬಂಧವಾದ ವಾಗ್ವಾದಕ್ಕೆ ಮಧ್ವಾಚಾರ್ಯರು ಸಿಕ್ಕಿದರೆ ಸಾಕೆಂದು ಸಮಯ ಕಾಯುತ್ತಿದ್ದನು........ ಇಬ್ಬರಿಗೂ ಎಂಟು ದಿವಸಗಳ ವರೆಗೆ ವಾಗ್ವಾದವು ನಡೆದು ಕಡೆಗೆ ದ್ವೈತ ಸಿದ್ಧಾಂತವೇ ನ್ಯಾಯಯುಕ್ತವಾದುದೆಂದು ಜಯಸಿಂಹನು ತೀರ್ಮಾನಿಸಿದನು........ ಒಟ್ಟು ಕೂಡಿ ವಾಗ್ವಾದವು ನಡೆದ ಸ್ಥಳಕ್ಕೆ 'ಕೂಡಲು' ಎಂದು ಹೆಸರಾಯಿತು."

"ಜಯಸಿಂಹನು ಸಂಸ್ಕೃತ ಪಂಡಿತನಾಗಿ ಕಾವ್ಯಗಳನ್ನು ಬರೆದುದರಿಂದ ಅವನಿಗೆ ಕವಿಸಿಂಹನೆಂಬ ಹೆಸರು ಬಂತು. ಈಗಲೂ ಈ ಕುಟುಂಬದ ಅರಸರಿಗೆ ಸಂಸ್ಕೃತ ವಿದ್ಯೆ ಚೆನ್ನಾಗಿ ತಿಳಿದಿದೆ. ಈ ಅರಸನು ಬೇಳ ಗ್ರಾಮದಲ್ಲಿರುವ ಕುಮಾರಮಂಗಲದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದನು." (ಇವನ ಹೆಸರಿನ ಖ್ಯಾತಿಯಿಂದ ಕುಂಬಳೆಯ ಅರಸರಿಗೆಲ್ಲ ಕವಿಸಿಂಗರಸರೆಂದು ರೂಢಿಯಾಯಿತು.)

"ಜಯಸಿಂಹನ ಬಳಿಕ ಆಳಿದ ಕೆಲವು ಅರಸರ ಹೆಸರು ಮಾತ್ರವೇ ಗೊತ್ತಿವೆ.... 1) ರಾಮಂತರಸು, 2) ಜೋಳದೇಶಿಂಗರಾಯ, 3) ಪ್ರೌಢರಾಯ, 4) ವೀರನರಸಿಂಹರಾಯ, 5) ಪಾಳ್ಯದ ನರಸಿಂಗರಾಯ.................. 9) ಕೃಷ್ಣರಾಯ,........"(ಕವಿಸಿಂಹನಂತೆ ರಾಮಂತರಸನೂ ವಿಶೇಷ ಪ್ರಖ್ಯಾತಿಗೆ ಬಂದವನು. ಇವನ ಹೆಸರಿನಿಂದಾಗಿ ಆ ಕುಟುಂಬದವರಿಗೆಲ್ಲ ರಾಮಂತರಸರೆಂದೂ ಹೆಸರು ಬಿದ್ದಿದೆ.)

"ಈ ಕೃಷ್ಣರಾಯನ ಕಾಲದಲ್ಲಿ ಇಕ್ಕೇರಿಯ ಶಿವಪ್ಪ ನಾಯಕನು ದ. ಕ. ಜಿಲ್ಲೆಯ ದಕ್ಷಿಣ ಭಾಗಕ್ಕೆ ಬಂದಾಗ ಇವನು ಯುದ್ಧಕ್ಕೆ ನಿಂತುದರಿಂದ ಶಿವಪ್ಪನು 1654ರಲ್ಲಿ ಇವನನ್ನು ಸೋಲಿಸಿ ಇವನ ರಾಜ್ಯವನ್ನು ಸಣ್ಣದು ಮಾಡಿದನು. ಅಡೂರು, ಮಧೂರು, ಕಾವು, ಕಣಿಪುರ (ಕುಂಬಳೆ) ಎಂಬ 4 ಸೀಮೆಗಳು ಮಾತ್ರವೇ ಇವನಿಗೆ ಕೊಡಲ್ಪಟ್ಟವು. ಮಂಜೇಶ್ವರ ಮುಂತಾದ ಸೀಮೆಗಳು ಮೊದಲೇ ತಪ್ಪಿಹೋಗಿದ್ದುವು. ಶೀರೆ ಹೊಳೆಯಿಂದ ಪಯಸ್ವಿನಿಯ ವರೆಗೂ. ಅಡೂರಿನಿಂದ ಸಮುದ್ರದ ವರೆಗೂ ಇರುವ ಪ್ರದೇಶವು ಉಳಿಯಿತು. ಕುಂಬಳೆ ನದೀ ತೀರದ ಅರಮನೆಯನ್ನು ಬಿಟ್ಟು ಮಾಯಿಪ್ಪಾಡಿಯಲ್ಲಿ ಅರಮನೆ ಕಟ್ಟಿ ನಿಂತರು. ಈ ಅರಸನು ಮುಂದೆ ದಂಗೆ ಎಬ್ಬಿಸದ ಹಾಗೆ ಶಿವಪ್ಪ ನಾಯಕನು ಇಕ್ಕೇರಿ ಸಂಸ್ಥಾನದಿಂದ ರಾಮರಾಜ ಕ್ಷತ್ರಿಯರೆಂಬ ಜಾತಿಯವರನ್ನು ತಂದು ಕೋಟೆಯ ಪೂರ್ವ ಭಾಗದಲ್ಲಿ ನಿಲ್ಲಿಸಿದನು...."

"1784ರಲ್ಲಿ ಕುಂಬಳೆ ಅರಸನು ಇಂಗ್ಲಿಷರ ಕಡೆ ಸೇರಿದುದರಿಂದ ಟೀಪುವು ಅವನ ಖಾಸಗಿ ಆಸ್ತಿಯನ್ನು ಮಾತ್ರ ಬಿಟ್ಟು ರಾಜ್ಯವನ್ನು ಸೆಳಕೊಂಡನು. ಅನಂತರ ಇವನ ಅಳಿಯನು 1794ರಲ್ಲಿ ವಿರೋಧವಾಗಿ ನಿಂತದ್ದರಿಂದ ಅವನನ್ನು ಗಲ್ಲಿಗೆ ಹಾಕಿಸಿದನು. ಇವನ ಉತ್ತರಾಧಿಕಾರಿಯು ತಲಚೇರಿಗೆ ಹೋಗಿ ಇಂಗ್ಲೀಷರ ಮರೆಹೊಕ್ಕನು."

"1799ರಲ್ಲಿ ಶ್ರೀರಂಗಪಟ್ಟಣದ ಯುದ್ಧದ ಕಾಲದಲ್ಲಿ ಈ ರಾಜನು ಕುಂಬಳೆಗೆ ಬಂದು ಅಲ್ಲಲ್ಲಿ ಸುಲಿಗೆ ಮಾಡುತ್ತಿದ್ದನು. ಈ ಅರಸನು ತಮಗೆ ಸಹಾಯ ಮಾಡಿದುದಕ್ಕಾಗಿ ಇಂಗ್ಲಿಷರು ಅವನ ರಾಜ್ಯವನ್ನು ಅವನಿಗೆ ಬಿಟ್ಟುಕೊಟ್ಟರು. ಇವನು ಇಂಗ್ಲಿಷರ ಸ್ನೇಹಿತನಾಗಿದ್ದರಿಂದ ಅವರ ವಿರೋಧಿಯಾಗಿದ್ದ ಕೊಡಗು ರಾಜನು ಕುಂಬಳೆ ಸೀಮೆಯನ್ನು ಆಗಾಗ ಸುಲಿಗೆ ಮಾಡುತ್ತಿದ್ದನು........"

"ಈಗ ಮಾಯಿಪಾಡಿಯಲ್ಲಿ............ ಮುಖ್ಯ ರಾಣಿಯ ಹೆಸರು ಈಗಲೂ ಸುಶೀಲೆ ಎಂತಲೇ ಇರಬೇಕಂತೆ. ಈಗಿರುವ ರಾಣಿಯ ಹೆಸರೂ ಸುಶೀಲೆ ಎಂತಲೇ ಇದೆ. ಇವರು ತುಳು, ಮಲೆಯಾಳ, ಕನ್ನಡ ಭಾಷೆಗಳನ್ನು ಆಡುತ್ತಾರೆ. ಕುಂಬಳೆ ಗೋಪಾಲಕೃಷ್ಣನೇ ಇವರ ಕುಲದೇವರು."

ಶ್ರೀರಂಗಪಟ್ಟಣದ ಯುದ್ಧ ಸಂದರ್ಭದಲ್ಲಿ ಅರಸನು ಇಂಗ್ಲೀಷರ ಮಿತ್ರನಾಗಿ ಕುಂಬಳೆ ಸೀಮೆಯ ಮೇಲಿದ್ದ ತನ್ನ ದಾಹವನ್ನು ತಣಿಸಿಕೊಂಡನು. ಈ ವಿಚಾರ

ರಜಪುತಾನದಲ್ಲಿ ದಸರಾ ಹಬ್ಬ

ದಸರಾ ಮಹೋತ್ಸವವು ರಜಪುತಾನದಲ್ಲಿ ರಾಷ್ಟ್ರೀಯ ಹಬ್ಬವಾಗಿಯೇ ಆಚರಿಸಲ್ಪಡುತ್ತಿದೆ. ರಾವಣನನ್ನು ಗೆದ್ದು ಬಂದ ಶ್ರೀರಾಮಚಂದ್ರನೇ ತಮ್ಮ ಮೂಲಪುರುಷನೆಂದು ರಜಪೂತರು ನಂಬುತ್ತಾರೆ.

(ಕುಮಾರಿ ವಿನೋದಿನಿ ನಾಯಕ್, ಬಿ.ಎ., ಬಿ.ಟಿ.)

ರಜಪುತಾನದಲ್ಲಿ ದಸರಾಹಬ್ಬವನ್ನು, ಹಿಂದೂದೇಶದ ಇತರ ಕಡೆಯಲ್ಲಿ ಜರಗಿಸುವುದಕ್ಕಿಂತಲೂ ಭಿನ್ನರೀತಿಯಲ್ಲಿ ಜರಗಿಸುತ್ತಾರೆ. ರಜಪುತಾನದಲ್ಲಿ ಈ ಹಬ್ಬಕ್ಕೆ ಬೇರೆಯೇ ಅರ್ಥವನ್ನು ಹಚ್ಚಿರುವರು. ಶ್ರೀ ರಾಮಚಂದ್ರನು ದಸರಾಹಬ್ಬದ ನಾಯಕನಾಗಿರುವನು; ಅವನ ವಿವಾಹ ಮಹೋತ್ಸವದ ಮೆರವಣಿಗೆ ಮತ್ತು ರಾಕ್ಷಸನಾದ ರಾವಣನ ದಹನ—ಇವು ಈ ಹಬ್ಬದ ಮುಖ್ಯ ಆಕರ್ಷಣೆಗಳಾಗಿರುವುವು.

ದಸರಾಹಬ್ಬವನ್ನು ರಾಷ್ಟ್ರೀಯ ಹಬ್ಬವಾಗಿಯೇ ಆಚರಿಸಲ್ಪಡುತ್ತಿದೆ. ರಾವಣನನ್ನು ಗೆದ್ದು ಬಂದ ಶ್ರೀ ರಾಮಚಂದ್ರನೇ ರಜಪೂತ ಜನಾಂಗದ ಮೂಲಪುರುಷನೆಂದು ರಜಪೂತರು ಭಾವಿಸುತ್ತಾರೆ. ಹಾಗಾಗಿ ಈ ಹಬ್ಬವು ಚಾರಿತ್ರಿಕವಾಗಿಯೂ, ರಾಷ್ಟ್ರೀಯವಾಗಿಯೂ ಮಹತ್ವಿಕೆಯನ್ನು ಪಡೆಯುತ್ತದೆ. ಪ್ರಾರಂಭದಲ್ಲಿ ಯುದ್ಧದ ಸಿದ್ಧತೆಗಳನ್ನು ಏರ್ಪಡಿಸುತ್ತಾರೆ; ಬಳಿಕ ಸಂಪ್ರದಾಯದಂತೆ ಕುದುರೆ, ಆನೆ ಮತ್ತಿತರ ಎಲ್ಲಾ ಯುದ್ಧೋಪಕರಣಗಳನ್ನೂ, ಆಯುಧಗಳನ್ನೂ ಪೂಜಿಸುತ್ತಾರೆ; ಕೊನೆಗೆ ರಾವಣನೊಂದಿಗೆ ಯುದ್ಧ ಹೂಡುವ ದೃಶ್ಯವು ಜರಗುತ್ತದೆ. "ರಾವಣನು, ಹಿಂದೂದೇಶದ ಮೂಲ ನಿವಾಸಿಗಳ ಪ್ರತೀಕ; ಈ ಮೂಲನಿವಾಸಿಗಳನ್ನು ಮೊತ್ತಮೊದಲು ಹಿಂದೂಸ್ಥಾನದಲ್ಲಿ ನೆಲೆಯೂರಿದ ಆರ್ಯರು ಯುದ್ಧದಲ್ಲಿ ಸೋಲಿಸಿ ವಿಜಯಿಗಳಾದರು" ಎಂದು ರಜಪೂತರು ಬಲವಾಗಿ ನಂಬುತ್ತಾರೆ.

ಸರ್ವಸಾಧಾರಣವಾಗಿ ರಜಪುತಾನದ ಯಾವುದೇ ಭಾಗದಲ್ಲಿ ದಸರಾಹಬ್ಬವು ಜರಗುವ ರೀತಿಯನ್ನು ಅವಲೋಕಿಸಿದರೆ, ಈ ವಿಷಯಗಳೇ ಪ್ರಾಮುಖ್ಯವಾಗಿವೆ.

ನವರಾತ್ರಿಯ ಪ್ರಾರಂಭದ ಮೂರು ನಾಲ್ಕು ದಿನಗಳ ತನಕ, ರಾವಣವಿಗೆದುರಾಗಿ, ಯುದ್ಧಸಿದ್ಧತೆಗಳು ಜರಗುತ್ತವೆ. ಬಳಿಕ ವಿಶಾಲವಾದ ಅರಮನೆಯ ಪ್ರಾಂಗಣದಲ್ಲಿ ಕತ್ತಲಾದ ಮೇಲೆ ದರ್ಬಾರು ನೆರೆಯುತ್ತದೆ. ಅರಸುಮನೆತನದ ಪ್ರತಿನಿಧಿಗಳು, ಸರದಾರರು, ಮಂತ್ರಿಗಳು ವರ್ತುಲಾಕಾರದಲ್ಲಿ ನಿಂತುಕೊಳ್ಳುತ್ತಾರೆ. ನಿಯಮಿತ ಸ್ಥಳಗಳಲ್ಲಿ ಪುರೋಹಿತರು, ಪೂಜಾಸಾಮಗ್ರಿಗಳನ್ನೂ, ಹೂಮಾಲೆಗಳನ್ನೂ ಹಿಡಿದುಕೊಂಡು ನಿಲ್ಲುತ್ತಾರೆ. ಒಂದರ ಹಿಂದೆ ಒಂದಾಗಿ ಸಾಲಿನಲ್ಲಿ ಅಲಂಕೃತ ಕುದುರೆಗಳನ್ನು ತರುವರು. ಮೊದಲಾಗಿ ಅರಸನು ಏರುವ ಉತ್ತಮ ಅಶ್ವವನ್ನು ತರುತ್ತಾರೆ ಕುದುರೆಗಳಿಗೆ ಹೂ, ನೀರು, ಸಿಹಿ ಮಿಠಾಯಿ ಕೊಟ್ಟನಂತರ, ಆರಾಧಿಸಿ ಹೂಮಾಲೆಗಳನ್ನು ಹಾಕುತ್ತಾರೆ. ತಲೆ, ಕಿವಿಗಳು ಮತ್ತು ಕಣ್ಣುಗಳ ಸುತ್ತಲೂ ಬಣ್ಣಗಳಿಂದ ಅಲಂಕರಿಸಲ್ಪಟ್ಟ ಆನೆಗಳು ಕ್ರಮಪ್ರಕಾರವಾಗಿ, ಗಂಭೀರವಾಗಿ ನಡೆದು ಬಂದು ಪೂಜೆಯನ್ನು ಪಡೆಯುತ್ತವೆ. ಸೊಂಡಿಲುಗಳಿಗೆ ಹಾಕಿದ ಹೂಮಾಲೆಗಳನ್ನು ನಿಮಿಷಾರ್ಧದೊಳಗೆ ಮುಗಿಸಿಬಿಡುತ್ತವೆ! ಸಮಾರಂಭದ ಈ ಅಂಕವು ಕೊನೆಗೊಂಡರೆ, ಸಭೆಯು ಉಳಿದ ಕಾರ್ಯಕಲಾಪಗಳಿಗೆಂದು ಪ್ರಾಂಗಣದಿಂದ ಒಳಗೆ ಸರಿಯುತ್ತದೆ.

ಅಗಲವಾದ ಚಾವಡಿಯಲ್ಲಿ. ಸಿಂಹಾಸನ, ಬೆಳ್ಳಿಯ ಉಪಕರಣಗಳೂ, ಇವುಗಳ ಕೆಳಗಿನ ಅಂತಸ್ತಿನಲ್ಲಿ ಗುರಾಣಿಗಳು ಇರಿಸಲ್ಪಡುತ್ತವೆ. ಥಳಥಳಿಸುವ ಪ್ರತಿ ಗುರಾಣಿಯ ಮೇಲೆ ಪ್ರಕಾಶಿಸುವ ಎರಡೆರಡು ಖಡ್ಗಗಳನ್ನು ಇರಿಸುತ್ತಾರೆ. ಅತೀ ಕೆಳಗಿನ ಅಂತಸ್ತಿನಲ್ಲಿ ಯುದ್ಧ ಕವಚಗಳು, ಶಿರಸ್ತ್ರಾಣಗಳೇ ಮೊದಲಾದ ವೀರೋಚಿತ ತೊಡುಗೆಗಳು ಇರಿಸಲ್ಪಡುತ್ತವೆ ಪ್ರಾಯಪ್ರಬುದ್ಧ ಪುರೋಹಿತನು ಉಚ್ಛಸ್ವರದಲ್ಲಿ ಮಂತ್ರಗಳನ್ನು ಪಠಿಸುತ್ತ, ಯುದ್ಧೋಪಕರಣಗಳ ಮೇಲೆ ಸುಗಂಧದ್ರವ್ಯ ಹಾಗೂ ಪುಷ್ಪಗಳನ್ನು ಎರಚುವನು. ಈ ಕಾರ್ಯಕ್ರಮವು ಕೊನೆಗೊಳ್ಳುತ್ತಿದ್ದಂತೆ ಮೃದಂಗಗಳನ್ನು ಬಾರಿಸುವರು. ತೋಪುಗಳನ್ನು ಹಾರಿಸಲ್ಪಡುವುವು.

ಮಾರುದಿನ ಬೆಳಗ್ಗೆ ದರ್ಬಾರು ಮೆರವಣಿಗೆಯಿಂದ ದೇವಸ್ಥಾನವೊಂದಕ್ಕೆ ತೆರಳುವುದು. ರಕ್ತವರ್ಣದ ವಸ್ತ್ರಗಳಿಂದ ಆಚ್ಛಾದಿತವಾದ ಒಂಟೆಗಳು, ಅವುಗಳಿಗಿಂತಲೂ ಮುಂದೆ ವಾದ್ಯ ಮತ್ತು ಸೇನೆ ಹೊರಡುವುವು. ಇವುಗಳ ಹಿಂದೆ, ಅತ್ಯಂತ ಸುಂದರವಾದ ರಾಜೋಚಿತ ಉಡುಪುಗಳಿಂದ ಶೋಭಿಸುವ ರಾಜಕುಮಾರನು ಅಶ್ವವನ್ನೇರಿ ಬರುವನು. ದೇವಸ್ಥಾನವು ಸಮೀಪಿಸಿದೊಡನೆ ಅಶ್ವದಿಂದ ರಾಜಕುಮಾರನು ಇಳಿಯುವನು. ದೇವರನ್ನು ಪೂಜಿಸಿ ಭಕ್ತಿಯ ಕಾಣಿಕೆಯನ್ನು ಅರ್ಪಿಸಿ ಮೆರವಣಿಗೆಯು ಸಂಭ್ರಮದಿಂದ ಮರಳುವುದು. ತೋಪುಗಳು ಧ್ವನಿಸುವುವು.

ಸಂಜೆ ಸೂರ್ಯನು ಅಸ್ತಮಿಸಿ ರಾತ್ರಿಯು ಕಾಲಿಟ್ಟೊಡನೆ ದಸರಾಹಬ್ಬದ ಮುಖ್ಯಾಂಗವಾದ "ರಾವಣ ದಹನ"ವು ಜರಗುತ್ತದೆ. ಅದಕ್ಕಿಂತ ಮೊದಲು ಶಮೀವೃಕ್ಷದ ಪೂಜೆಯಿದೆ. ಹಾಲು, ತೆಂಗಿನಕಾಯಿ, ತೆಂಗಿನಕಾಯಿಯ ಮೇಲೊಂದು ಹಳೆಯ ಬೆಳ್ಳಿಯ ನಾಣ್ಯವನ್ನು ಇರಿಸಿ ಪೂಜಿಸುವರು. ವಿಶಾಲವಾದ ನಗರದ ಹೊರಬಯಲಿನಲ್ಲಿ ಅತ್ಯಂತ ಮನೋಹರ ಹಾಗೂ ಭವ್ಯ ದೃಶ್ಯವಿದನ್ನು ಸಂಜೆಯ ನಂತರ ಸಾವಿರಾರು ಜನರು ನೋಡಿ ಆನಂದಿಸುತ್ತಾರೆ. ದಾರಿಯ ಇಕ್ಕಡೆಗಳಲ್ಲಿಯೂ ಮನೆಮನೆಗಳ ಹೊಸ್ತಿಲಿನಲ್ಲಿಯೂ ಕಟ್ಟಡಗಳ ಮೇಲಂತಸ್ತುಗಳಲ್ಲಿಯೂ ಸ್ತ್ರೀಯರು, ಮಕ್ಕಳು ಅಸಂಖ್ಯಾತರಾಗಿ ನೆರೆದಿರುತ್ತಾರೆ. ಉತ್ಸಾಹ, ನಗೆ, ಮಾತುಗಳ ಗದ್ದಲ. ಹೊಳೆಯುವ ಬೆಳ್ಳಿಯ ಆಭರಣಗಳು, ನೀಲಿ, ಶುಭ್ರ ಹಸುರು, ಕಿತ್ತಳೆ, ಕಡು ಕೆಂಪು, ಎಳೆ ಹಳದಿ ಬಣ್ಣಗಳ ಸೀರೆಗಳು ದಾರಿಯುದ್ದಕ್ಕೂ ಕಣ್ಮನಗಳನ್ನು ಸೆಳೆಯುತ್ತವೆ. ಇವರೆಲ್ಲರೂ ಆತುರದಿಂದ "ರಾವಣ ದಹನ"ವನ್ನು ನಿರೀಕ್ಷಿಸಲು ಉತ್ಸುಕರಾಗಿ ಕಾದು ನಿಲ್ಲುತ್ತಾರೆ ಸಾಧಾರಣ ಮೂವತ್ತು ಅಡಿ ಎತ್ತರ ಇರುವ 'ರಾವಣ'ನನ್ನು ಬಯಲಲ್ಲಿ ನಿಲ್ಲಿಸಿರುತ್ತಾರೆ ಮಣ್ಣು ಮತ್ತು ಜೇಡಿನಿಂದ ತಯಾರಿಸಿದ ಈ ಆಕೃತಿಯ ಸುತ್ತಲೂ ಅವನ ಪರಿವಾರವು ಇರುವುದು. ವಿಕಾರವಾದ ಮತ್ತು ಚಿತ್ರಾಗಿ ಬಣ್ಣ ಹಚ್ಚಿದ ಈ ಆಕೃತಿಗಳು ನೋಟಕ್ಕೆ ಬೀಭತ್ಸವಾಗಿರುತ್ತವೆ. ಬೆದರಿಕೆಯನ್ನು ಹುಟ್ಟಿಸುವ ಮುಖಗಳು ದೊಡ್ಡ ದೊಡ್ಡ ಮರದ ಹಲ್ಲುಗಳನ್ನು ಪ್ರದರ್ಶಿಸುವ ಬಾಯಿ—ಇಂತಹ ವೈರಿಗಳನ್ನು ನಿಜವಾಗಿಯೂ ದಹಿಸಿಬಿಡಬೇಕು ಎಂದು ಕಂಡರೆ ಆಶ್ಚರ್ಯವೇನು?

ದಟ್ಟವಾದ ಜನಸಂದಣಿಯನ್ನು ಹಾದು, ನಿಧಾನವಾಗಿ ಮೆರವಣಿಗೆಯು "ರಾವಣ ಮತ್ತು ಪರಿವಾರ" ವಿದ್ದಲ್ಲಿಗೆ ತಲಪುವಾಗ, ಕತ್ತಲೆಯು ಸರಿಯಾಗಿ ಮುತ್ತುತ್ತದೆ, ಆಗಸದಲ್ಲಿ ಚಂದ್ರನು ಮೂಡಿರುತ್ತಾನೆ. ಪ್ರಮುಖ ಸರದರನೊಬ್ಬನು 'ರಾವಣ'ನ ಹೊಟ್ಟೆಯನ್ನು ಈಟಿಯಿಂದ ತಿವಿಯುತ್ತಾನೆ. ಹೊಟ್ಟೆಯೊಳಗೆ ಅವಿತಿಸಿದೆ. ಮಡಿಕೆಯೊಳಗಿಂದ ಧಾರಾಕಾರವಾಗಿ ಕೆಂಪು ಬಣ್ಣದ ನೀರು ಸುರಿಯಲಾರಂಭಿಸುತ್ತದೆ. ಈ "ರಕ್ತಪಾತ"ವು 'ರಾವಣ' ಇತಿಶ್ರೀಯ ಚಿಹ್ನೆಯಾಗಿರುವುದು. ಅದನ್ನು ಕಂಡೊಡನೆ ಆಕಾಶಬಾಣ. ಹೂಬತ್ತಿ, ಗರ್ನಾಲು, ತೋಪುಗಳನ್ನು ಹೇರಿಸಿ ರಾವಣನನ್ನು ಸೋಲಿಸಿದ ವಿಜಯೋತ್ಸಾಹವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ಮೆರವಣಿಗೆಯು ಹಿಂದಿರುಗುತ್ತದೆ. ಸೇರಿದ ಜನರು ನಿಧಾನವಾಗಿ, ಮುಪಸ್ಸಿಲ್ಲದ ಮನಸ್ಸಿನಿಂದ, ಚದರುತ್ತಾರೆ.

ಮಾರನೆ ದಿನ ಸಂಜೆ ಬಯಲಿನಲ್ಲಿ ರಾಜ್ಯದ ಸೇನೆಯನ್ನು ನಿರೀಕ್ಷಿಸುವ ಕೊನೆಯ ಕಾರ್ಯಕ್ರಮವು ಇರುವುದು. ಒಂಟೆಗಳು, ರಾಹುತರು, ಕಾಲಾಳುಗಳು ಇವರೆಲ್ಲರೂ ಕ್ರಮಬದ್ಧವಾಗಿ ಸಾಲಾಗಿ ನಿಂತುಕೊಂಡಾಗ, ರಾಜನಾಗಲೀ, ಅವನ ಪ್ರತಿನಿಧಿಗಳಾಗಲ್ಲಿ ಅವರನ್ನು ಈಕ್ಷಿಸುತ್ತಾರೆ; ಬಳಿಕ ಸರದಾರರೂ, ಊರ ಪ್ರತಿಷ್ಠಿತ ವ್ಯಕ್ತಿಗಳೂ ತಮ್ಮ ಶಕ್ತ್ಯನುಸಾರ ದರ್ಬಾರಿಗೆ "ನಜರ್"ನ್ನು ಸಲ್ಲಿಸುತ್ತಾರೆ. ತೋಪುಗಳ ಹಾರಿಸುವಿಕೆಯೊಂದಿಗೆ ಸಮಾರಂಭವು ಮುಕ್ತಾಯಗೊಳ್ಳುತ್ತದೆ.

ಹಿಂದೆ, ರಾಜಧಾನಿಯಲ್ಲಿ ರಾಜನೂ ರಾಜಕುಮಾರನೂ ಈ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ರಾಜಮನೆತನವೇ ಸ್ವತಹ ಹಬ್ಬದಲ್ಲಿ ಭಾಗವಹಿಸುತ್ತಿದ್ದುದರಿಂದ ಸಮಾರಂಭಗಳಿಗೆ ವಿಶೇಷ ಕಳೆಯೇರುತ್ತಿತ್ತು. ಜಿಲ್ಲೆಗಳಲ್ಲಿ ಸಣ್ಣ ವರ್ತುಲಗಳಲ್ಲಿ ಅವರವರ ಮಟ್ಟಕ್ಕನುಸಾರವಾಗಿ ಕಲೆಕ್ಟರರೋ, ತಹಶಿಲ್ದಾರರೋ ಈ ಹಬ್ಬಗಳಲ್ಲಿ ಭಾಗವಹಿಸುತ್ತಿದ್ದರು. ಇದೀಗ ಹಿಂದೂದೇಶವು ಸ್ವಾತಂತ್ರ್ಯವನ್ನು ಪಡೆದ ಮೇಲೆ ಅರಸೊತ್ತಿಗೆಯು ಮರೆಯಾಗುತ್ತಲಿದ್ದು ಹಬ್ಬವು ಹಿಂದಿನ ಗಾಂಭೀರ್ಯವನ್ನು ಕಳಕೊಂಡಿದೆ; ಆದರೆ ಹಬ್ಬವು ಎಂದೆಂದಿಗೂ ಹಬ್ಬವೇ ಅಲ್ಲವೇ?

("Indian State Railways Magazine" ಇದರಲ್ಲಿ ಪ್ರಕಟವಾದ ರಜಪುತಾನದಲ್ಲಿ "ದಸರಾ" ಎಂಬ ಲೇಖನವನ್ನನುಸರಿಸಿ ಬರೆದುದು.)

—

ನವರಾತ್ರಿ ಉತ್ಸವ: ಕಾಸರಗೋಡು ಕೋರಕೋಡು ಆರ್ಯಕಾತ್ಯಾಯನೀ ಶ್ರೀ ಮಹಾದೇವಿ ಸನ್ನಿಧಿಯಲ್ಲಿ ವರ್ಷಂಪ್ರತಿ ಜರಗುವ ನವರಾತ್ರಿಮಹೋತ್ಸವವು ತಾ. 10ರಂದು ಆರಂಭವಾಗಿದ್ದು ತಾ. 19ರ ವರೆಗೆ ನಡೆಯಲಾಗಿದೆ.

—

ವಾಗಿ 'ರಾಜೇಂದ್ರನಾಮೆ' ಎಂಬ ಕೊಡಗರಸರ ಚರಿತ್ರೆಯಲ್ಲಿ ಹೀಗೆ ಹೇಳಿದೆ:—

"ಕುಂಪನಿ ಸರಕಾರದ ಫೌಜು ಶ್ರೀರಂಗಪಟ್ಟಣ ತೆಗೆದುಕೊಳ್ಳುವ ಬಗ್ಗೆ ಬಂದ ವೇಳೆಯಲ್ಲಿ ಕೊಡಗಿನ ದೊರೆಗಳು ಬಹಳ ಮೆಹನತ್ತು ಮಾಡಿದ್ದಕ್ಕಾಗಿ ಕುಂಪನಿ ಸರಕಾರದ ಕೆಲವು ಸೀಮೆಯಿಂದ ಕೊಡಗರಸರಿಗೆ ಕುಮಾರಧಾರೆಯ ದಕ್ಷಿಣಕ್ಕಿರುವ ಸೀಮೆಗಳಿಂದ ಕೆಲವು ಸೀಮೆಗಳನ್ನು ಬಿಟ್ಟುಕೊಟ್ಟಿದ್ದಾರೆ. ಅವುಗಳಲ್ಲಿ ಸಾವಿರಾಳವಟ್ಟದ ಮಾಗಣೆ ಗ್ರಾಮ ಆರಕ್ಕೆ ವಿವರ—ಕುಂಬಡಾಜೆ ಗ್ರಾಮ, ಪೆರಡಾಲು ಗ್ರಾಮ, ಬೇಳೂರು ಗ್ರಾಮ, ಪಡ್ರೆ ಗ್ರಾಮ, ಉಬರಂಗಳ ಗ್ರಾಮ, ಬೇಳ ಗ್ರಾಮ, ಈ ಆರು ಗ್ರಾಮಗಳು— ಇದು 1804ನೇ ಇಸವಿಯಲ್ಲಿ. ಇದರಲ್ಲಿ 'ಕೂಡಲು' ಸಹ ಸೇರಿದೆ. ಈ ಗ್ರಾಮಗಳ ಕಂದಾಯ ಸುಂಕ ಸಾರಿಗೆ ಇತ್ಯಾದಿ ಆಸಳಿತೆಯ ಲೆಕ್ಕ ಪತ್ರವ್ಯವಹಾರಗಳಿಗೆ ಕೂಡಲು ಮನೆತನದ ಸಂಬಂಧಿಕನಾದ ದೇವಪ್ಪಯ್ಯನೆಂಬವನು ಕೊಡಗು ಜಿಲ್ಲೆಯಲ್ಲಿ ಶಿರಸ್ತೇದಾರನಾಗಿ ನೇಮಿಸಲ್ಪಟ್ಟಿದ್ದನು. ಬೇರೆ ಕೆಲ ಸ್ಥಾನಿಕ ಕುಟುಂಬಗಳೂ ರಾಜಕೀಯ ಉದ್ಯೋಗಸ್ಥರಾಗಿ ಕೊಡಗು ಜಿಲ್ಲೆಯಲ್ಲಿ ನೆಲೆನಿಂತಿದ್ದರು.

ನಮ್ಮ ಯಕ್ಷಗಾನ ಕವಿ ಪಾರ್ತಿಸುಬ್ಬನಿಗೆ ಆ ಶಿರಸ್ತೇದಾರ ದೇವಪ್ಪಯ್ಯನು ಸಂಬಂಧಿಕನಾಗಿದ್ದನೆಂದು (ಭಾವ) ಹೇಳುತ್ತಾರೆ. ಕಣಿಪುರ ದೇವಸ್ಥಾನದ ಹೊದ್ದಿನಲ್ಲಿದ್ದ ಪಾರ್ತಿಸುಬ್ಬನ ಹಿತ್ತಲು ಮನೆಯ ಕುರಿತು 1827ನೇ ಇಸವಿಯಲ್ಲಿ ನಡೆದ ಕೋರ್ಟು ವ್ಯವಹರಣೆಯಿಂದ ತಿಳಿಯುವ ಪ್ರಕಾರ ಪಾರ್ತಿಸುಬ್ಬನು ಸುಮಾರು 1810ನೇ ಇಸವಿಯಿಂದ ಕೊಡಗು ಜಿಲ್ಲೆಗೆ ಹೋಗಿ ವಾಸವಾಗಿದ್ದನೆಂಬ ಸಂಗತಿಯೂ ಈ ಚಾರಿತ್ರಿಕ ಸಂದರ್ಭಕ್ಕೆ ಹೊಂದಿಕೆಯಾಗಿಯೇ ಇದೆ ಎಂಬುದನ್ನು ಗಮನಿಸಬೇಕು.

—

ತುಳು ಸಂಧಿಯ ಕತೆ: ೮

ಓಯೆ ಮಹಾಲಿಂಗ ಸೆಟ್ಟಿ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಇವನ ಪೊಂಡತನ ಸಹಿಸಲಾರದೆ, ಕೊನೆಗೆ ಒನ್ನು ವಸಂತರಾಯಗೆ ನುಡಿದಳು:

"ನಾನು ಬಳೆಗಳನ್ನು ಇಡುವುದಾದರೆ, ಮಧ್ಯದಲ್ಲಿ ಏಳು ಪರೆಯ ಪರದೆ ಕಟ್ಟಬೇಕು."

ವಸಂತರಾಯ ಹಾಗೇ ಕಟ್ಟಿಸಿದ. ಪರದೆಯ ಒಳಗಡೆಯಿಂದ ಕೈ ಹೊರಗೆ ಚಾಚಿದಳು ಒನ್ನು. ಹೊರಗಿನಿಂದ ಬಳೆಗಾರ ಕೂತು, ಬಳೆಗಳನ್ನು ಅವಳ ಕೈಗೆ ಇಡತೊಡಗಿದ. ಬಳೆಗಳನ್ನು ಅವಳ ಕೈಗೆ ಹೊಗಿಸುತ್ತ, ಹೊಗಿಸುತ್ತ, ಅಮುಕುತ್ತ, ಅಮುಕುತ್ತ, ಸುರುಟುತ್ತ, ಸುರುಟುತ್ತ ಕೈಗಳೆರಡನ್ನೂ ಹದಮಾಡಿದನು. ರಕ್ತ ಚಿಮ್ಮುವಂತಾಯಿತು. ಒನ್ನು ಕ್ಷಣಕ್ಷಣಕ್ಕೆ ನೋವಿನಿಂದ ನಿಟ್ಟುಸಿರುವಂತಾಯಿತು.

"ಎಷ್ಟೋ ಬಳೆಗಾರರನ್ನು ನೋಡಿದ್ದೇನೆ. ಇಂತಹ ಬಳೆಗಾರರನ್ನು ನಾನು ನೋಡಿದಿಲ್ಲ!"

ಹೀಗೆಂದು ಕೊಂಡು ಗೊಣಗಿದಳು.

ವೇಳೆ ಸರಿಯಿತು. ಇನ್ನೂ ಬಳೆ ಇಟ್ಟು ಮುಗಿದಿಲ್ಲ. ಕತ್ತಲುಕವಿಯಿತು. ಆಗ ಹೇಗೂ ಎರಡೆರಡು ಬಳೆಗಳನ್ನು ಇಟ್ಟು ಮುಗಿಸಿದ.

"ಅಯ್ಯೋ! ನಾನು ಈ ಕತ್ತಲೆಯಲ್ಲಿ ಎಲ್ಲಿಗೆಂತ ಹೋಗಲಿ? ಕಣ್ಣು ಬೇರೆ ಕಾಣುವುದಿಲ್ಲ. ಅಮ್ಮಾ! ಅಯ್ಯಾ! ನನಗೆ ರಾತ್ರಿ ಬೆಳಗುಮಾಡುವುದಕ್ಕೆ ಒಂದಿಷ್ಟು ಇಲ್ಲಿ ಸ್ಥಳಕೊಡುವಿರಾ?"

ಒನ್ನು ಬಳೆಗಾರನ ಮಾತು ಕೇಳಿ ಸಿಟೆದುಕೊಂಡಳು.

"ಇಲ್ಲಿ ಜಾಗವಿಲ್ಲ."

ಬಳೆಗಾರ ಮತ್ತೂ ಮತ್ತೂ ವಿನಂತಿಸಿಕೊಳ್ಳುವಾಗ, ವಸಂತರಾಯ ತುಸು ಕನಿಕರಗೊಂಡು ಒನ್ನುಗೆ ಅರುಹಿದ:

"ಇರಲಿ, ಒನ್ನು! ಬಚ್ಚಲುಕೊಟ್ಟಿಗೆಯಲ್ಲಿ ಆತ ಮಲಗಿಕೊಳ್ಳಲಿ."

"ಬೇಡ! ಬೇಡ! ನನಗೆ ಮಿಂಯಲಿಕ್ಕೆ ಹೋಗುವಾಗ ಹೆದರಿಕೆಯಾಗುತ್ತದೆ."

"ಕಟ್ಟಿಗೆ ಗುಡಾಣದಲ್ಲಿ?"

"ಬೇಡ! ಅಲ್ಲಿಗೆ ಕಟ್ಟಿಗೆ ತರುವುದಕ್ಕೆ ಹೋಗಬೇಕು."

"ಹಟ್ಟಿಯಲ್ಲಿ?"

"ನನಗೆ ದನಗಳನ್ನು ಕರೆಯುವುದಕ್ಕೆ ಹೋಗಬೇಕು."

"ಬೂದಿಹಾಕುವ ಕೊಟ್ಟಿಗೆ?"

"ನನಗೆ ಬೂದಿಹಾಕಲಿಕ್ಕಿದೆ."

"ಸತ್ತುಕೊಳ್ಳಲಿ ಒನ್ನೋ! ಮಾಳಿಗೆ ಮೆಟ್ಟಿಲಿನ ಕೆಳಗತ್ತ ಬಿದ್ದುಕೊಳ್ಳಲಿ?"

ಅಂತು ಪುಣ್ಯಕ್ಕೆ ಒಪ್ಪಿದಳು. ಬಳೆಗಾರ ಅಲ್ಲೆ ಬಿದ್ದುಕೊಂಡ.

ಚೂರಿಲೆಯಲ್ಲಿ ಹಳಸಿದ ಅನ್ನ, ಅಂಬುಜೆಯ ಒಂದು ಚೂರು ಉಪ್ಪಿನಕಾಯಿಯನ್ನು ಬಳೆಗಾರನಿಗೆ ಬಡಿಸಲಾಯಿತು. ಅದನ್ನು ತೆಕ್ಕೊಂಡು ಹೋಗಿ ಬಳೆಗಾರ ಬೂದಿಯಲ್ಲಿ ತುರಿಕಿಸಿ ಬಂದ.

ಸಿರಿವಂತ ಮನೆಮಂದಿಗರು ತಿಂದುಂ ಮಲಗುವ ಹೊತ್ತಾಯಿತು.

ಮಾಳಿಗೆಯಲ್ಲಿ ವಸಂತರಾಯ ಮತ್ತು ಒನ್ನು ಇದ್ದಾರೆ. ಅವರ ವಿನೋದ ಸಲ್ಲಾಪ ಜರಗುತ್ತಿದೆ. ಅವಳ ಬಾಯಿಗೆ ಇವನು, ಇವನ ಬಾಯಿಗೆ ಅವಳು ತುಪ್ಪದಲ್ಲಿ ಕರಿದ ಗಾರಿಗೆಯನ್ನು ತುಂಡು ತುಂಡು ಮಾಡಿ ಇಡುತ್ತ ತಿಂದುಕೊಂಡು ವಿನೋದವಾಡುತ್ತಿದ್ದಾರೆ:

"ಒನ್ನೋ, ನೀನು ಇಷ್ಟು ದಿವಸ ವಾಯಿತು ಬಂದು. ಒಂದು ದಿನವಾದರೂ ನೀನು ನಿನ್ನ ಎದೆಯ ಮಾಟವನ್ನು ಪ್ರದರ್ಶಿಸಲಿಲ್ಲ."

....

ವೀಳ್ಯ ಮಡಿಚಿ ಪರಸ್ಪರರ ಬಾಯಿಗೆ ತುರುಕಿಸುತ್ತಿದ್ದಾರೆ.

"ಒನ್ನೋ, ನಾನು ಚಂದವಾ, ಮಾಲಿಂಗ ಸೆಟ್ಟಿ ಚಂದವಾ?"

"ರೂಪದಲ್ಲಿ ನನ್ನ ಗಂಡ ಮಾಲಿಂಗ ಸೆಟ್ಟಿ ಚಂದ. ಹಣದಲ್ಲಿ ನೀವು ಮೇಲು."

"ಹ್ಹ! ಹ್ಹ!....ಹ್ಹಾ....ಹ್ಹಾ....!"

ಈ ವಿನೋದ ಸಲ್ಲಾಪವನ್ನೆಲ್ಲ ಕಿವಿಕೊಟ್ಟು ಮಾಳಿಗೆ ಬುಡದಲ್ಲಿ ಬಿದ್ದುಕೊಂಡ ಬಳೆಗಾರ ಮಾಲಿಂಗ ಸೆಟ್ಟಿ ಕೇಳಿದ. ಎದ್ದ, ನೆಟ್ಟಗೆ ಹೋಗಿ ಹಟ್ಟಿಯ ದನಗಳನ್ನೆಲ್ಲ ಬಿಚ್ಚಿ ಅಟ್ಟಿದ.

ಮರಳಿ ಮಾಳಿಗಯ ಬುಡಕ್ಕೆ ಸರಿದು, ಹೀಗೆಂದು ಗಟ್ಟಿಯಾಗಿ ಒದರಿದನು:

"ಓ ರಾಯರೇ! ದನಗಳು ಹಟ್ಟಿಯಿಂದ ಹಗ್ಗ ತಪ್ಪಿಸಿಕೊಂಡು ಬಾಕಿಮಾರಿಗೆ ನುಗ್ಗಿದಂತಿವೆ. ಪಟ್ಟಿಯ ಬೇಲಿ ನುಗ್ಗಿ ತೆನೆ ತುಂಬಿದ ಪೈರನ್ನೆಲ್ಲ ತಿನ್ನುತ್ತಿವೆ. ಕಾಲಿನ ಪಟಪಟ ಸದ್ದು, ಜಗಿಯುವ ಕರಕರ ಸದ್ದು ಕೇಳುವುದು."

ಮೇಲಿನಿಂದ ರಾಯ ವಿಶಂತಿಸಿದ:

"ಸ್ವಲ್ಪ ಹೋಗಿ, ಅವುಗಳನ್ನು ಅಟ್ಟಿಕೊಂಡು ತಂದು ಹಟ್ಟಿಯೊಳಗೆ ಕಟ್ಟಲಾರೆಯಾ, ಬಳೆಗಾರ?"

ಹೊರಗಿನಿಂದ ಸೆಟ್ಟಿ ತನ್ನ ವಿಷಾದವನ್ನು ಪ್ರಕಟಿಸಿದ:

"ನನಗೆ ಕತ್ತಲೆಯಲ್ಲಿ ನಡಿಯುವುದಕ್ಕೆ ಕಣ್ಣು ಕಾಣಿಸುತ್ತಿಲ್ಲ, ರಾಯರೇ."

ವಸಂತರಾಯ ದಢಕ್ಕನೆ ಬಾಗಿಲು ತೆರೆದ. ಹೊರಗೆ ಬಂದು ಬಾಕಿಮಾರಿನತ್ತ ಧಾವಿಸಿದ. ಒನ್ನು ಬಾಗಿಲನ್ನು ಮರಳಿ ಕ್ಕಿದಳು.

ಸೆಟ್ಟಿ ಇದೇ ಪ್ರಸಂಗವನ್ನು ಎದುರು ನೋಡುತ್ತಿದ್ದ. ಒಂದೇ ಒದೆತಕ್ಕೆ ಬಾಗಿಲನ್ನು ತುಳಿದು ಬಿಚ್ಚಿದ. ಒಳಗೆ ನುಗ್ಗಿದ. ಕೈಯಲ್ಲಿ ಖಡ್ಗವನ್ನು ಝಳಪಿಸುತ್ತ, ಕಣ್ಣು ಕಂಪಡರಿಸುತ್ತ ಒನ್ನುವನ್ನು ಹುಡುಕುತ್ತ, ಹುಡುಕುತ್ತ ಹತಪಥ ಓಡಾಡಿದ. ಒನ್ನುವಿನ ಸುಳಿಯನ್ನು ಕಾಣದಾದನು. ಆದರೆ ಮೂಲೆಯಲ್ಲೊಂದು ಗೆರಸೆ ಮತ್ತು ಅದರ ಒತ್ತಟ್ಟಿಗೆ ಒಂದು ಪೊರಕೆ ಅಡ್ಡಲಾಗಿದ್ದವು. ಪೊರಕೆ ಚಳಿಗುಟ್ಟಿ ಕುಣಿಯುತ್ತಿತ್ತು. ಒನ್ನುವಿನ ತುರುಬನ್ನು ಹಿಡಿದು ದರದರನೆ ಈಚೆಗೆ ಸೆಳೆದನು.

"ಒದರು! ಯಾರು ಚಂದ? ಯಾರು ಮೇಲು?

ಒನ್ನು ಭಯಭೀತಿಯಿಂದ ನಡುಗುತ್ತ, ತೇಕುತ್ತ ಒದರಿದಳು:

"ರೂಪದಲ್ಲಿ ನನ್ನ ಗಂಡ ಚಂದ! ಹಣದಲ್ಲಿ ವಸಂತರಾಯ ಮೇ........ಲು."

ಅವಳನ್ನು ಕಡಿದು ಹದಿನಾರು ತುಂಡುಮಾಡಿದ!

ಅಷ್ಟರಲ್ಲಿ ದನಗಳನ್ನು ಹಟ್ಟಿಯಲ್ಲಿ ಬಂಧಿಸಿ, ವಸಂತರಾಯ ಬಂದುಕೊಂಡ. ಅವನ ಜುಟ್ಟನ್ನು ಹಿಡಿದು ಎಳೆದು ಹಾಕಿದ. ಅರಚಿದ:

"ನಮ್ಮ ಒಕ್ಕೈತ್ರಿಜಾಗದ ಹೆಣ್ಣಿಂದಿರನ್ನು ಮೊದಲೆಷ್ಟು ನೀನು ಮದುವೆಯಾಗಿದ್ದೆ?"

ಹೀಗೆಂದು ಜರೆದು, ಅವನನ್ನು ಸಹ ಸಂಹರಿಸಿ ಹದಿನಾರು ಚೂರು ಹಾಕಿದ!

ಅಲ್ಲಿಂದ ತೆರಳಿದ. ಚೆಲುವೆ ಮನೆಗೆ ನುಗ್ಗಿದ. ಅವಳ ತಲೆ ಸೂಡಿಯನ್ನು ಹಿಡಿದು ಎಳೆದು ಹಾಕಿ ಗುಡುಗಿದ:

"ಎಷ್ಟು ಸಿಕ್ಕಿತು? ಕಳಸೆ ಹಣ ಸಿಕ್ಕಿತಾ? ಗಲುಕಿ ತಿನ್ನುವೆಯಾ? ಇನ್ನೆಷ್ಟು ನಮ್ಮ ಹೆಣ್ಣುಗಳ ಮಾರಾಟ ಮಾಡುವೆ ನೀನು?"

ಅವಳನ್ನು ಕೂಡ ಕಡಿದು ಹದಿನಾರು ಹೋಳು ಮಾಡಿ ಎಸೆದು ಬಳಿಕ ಬಂದು ತನ್ನ ಅರಮನೆ ಸೇರಿದ.

ಕೆಲವು ಸಮಯ ದಾಟಿತು. ಎರಡಾವರ್ತಿ ಓಯೆ ಮಹಾಲಿಂಗ ಸೆಟ್ಟಿ ಹೆಣ್ಣು ಹುಡುಕಿದ.

"ಜಗಪತಿ ಕುಂಕುಮ ಎಂಬ ಹೆಸರಿನ ಕನ್ನಿಕೆಯನ್ನು ನೋಡಿ ನಿಶ್ಚಯ ಮಾಡಿದ. ಇವಳು ದೇವೇಂದ್ರನೆಂಬವನ ತಂಗಿ. ಇವಳನ್ನು ಮಹಾಲಿಂಗ ಸೆಟ್ಟಿ ಪುನರ್ವಿವಾಹ ಮಾಡಿಕೊಂಡನು.

ವಿವಾಹನಂತರ ಒಂದೆರಡು ತಿಂಗಳು ಉರುಳಿದವು. ಎರಡನೇ ಬಾರಿ ದಂಡಿಗೆ ಹೊರಡಲು ಓಲೆ ಬಂದುಕೊಂಡಿತು. ಹೆಂಡತಿ ಜಗಪತಿ ಕುಂಕುಮಳನ್ನು ಕರೆದು ಹೇಳಿದ:

"ನನಗೆ ದಂಡಿಗೆ ಹೋಗಲು ಆಜ್ಞೆ ಬಂದಿದೆ. ನಾನು ಹೋಗುತ್ತೇನೆ."

ಜಗಪತಿ ಕುಂಕುಮ ಕಣ್ಣಲ್ಲಿ ಹನಿ ತುಂಬಿಸಿಕೊಳ್ಳುವಳು.

"ಅಯ್ಯೋ ನನ್ನವರೇ! ನೀವು ಹೋಗಿ ಸೋತರೆ, ಗಂಡಾಂತರ, ಮೃತ್ಯುಗಳಿಗೆ ಸಿಲುಕಿಕೊಂಡರೆ ನನಗೆ ಹೇಗೆ ಗೊತ್ತಾಗಬೇಕು?"

ಸೆಟ್ಟಿ ಒಂದು ತುಳಸಿ ಗಿಡವನ್ನು ತಂದು ಅಂಗಳದಲ್ಲಿ ನೆಟ್ಟನು ಮತ್ತು ಹೇಳಿದನು:

"ಇಗೋ! ಈ ಗಿಡವು ಬಾಡಿದರೆ ನಾನು ದಂಡಿನಲ್ಲಿ ಸೋತು ಸತ್ತು ಹೋದೆನೆಂದು ತಿಳಿ. ಗಿಡವು ದಿನದಿಂದ ದಿನಕ್ಕೆ ಕಸುಗೊಂಡು ಬಲುಹಿದರೆ ನಾನು ಇದ್ದೇನೆ ಎಂದು ತಿಳಿ. ಒಂದು ನಂದಾ ದೀಪವನ್ನೂ ಹೊತ್ತಿಸಿ ಒಳಗೆ ಇಡು. ಅದರ ಬೆಳಕು ಕುಗ್ಗಿ ನೊಂದಿಕೊಂಡರೆ ನಾನು ಗಂಡಾಂತರಕ್ಕೆ ಒಳಗಾಗಿರುವೆನೆಂದೂ ಝುಗ ಝುಗಿಸುತ್ತ ಇದ್ದರೆ ಇದ್ದೇನೆಂದೂ ಗ್ರಹಿಸು."

ದುಸ್ತು ಅಲಂಕಾರ, ಸರಂಜಾಮುಗಳನ್ನು ಮಾಡಿಕೊಂಡನು. ಮಹಾಲಿಂಗ ಸೆಟ್ಟಿ ಎರಡನೇ ಬಾರಿ ದಂಡಿಗೆ ಸಾಗಿದನು.

ಹೀಗೇ ಇತ್ತ ಜಗಪತಿ ಕುಂಕುಮ ತುಳಸಿಗೆ ನೀರು ಎರೆಯುತ್ತ, ನಂದಾದೀಪಕ್ಕೆ ಎಣ್ಣೆಯನ್ನು ಸುರಿಯುತ್ತ ಇರುವಳು. ಆದರೆ ಸ್ವಲ್ಪ ಸಮಯದ ನಂತರ ತುಳಸಿ ಬಾಡಿಕೊಳ್ಳುವುದು. ನಂದಾದೀಪ ನೊಂದಿಕೊಳ್ಳುವುದು. ಆವಾಗ ಕುಂಕುಮಳಿಗೆ ಗಂಡನ ದುರ್ವಿಧಿ ಖಚಿತವಾಗಿಕೊಳ್ಳುವುದು.

ತನ್ನ ಅಣ್ಣನಾದ ದೇವೇಂದ್ರನ ಅರಮನೆಗೆ ಬಂದು ತನ್ನ ದುಃಖವನ್ನು ತೋಡಿಕೊಂಡಳು. ತನ್ನ ಕರಿಮಣಿ, ಮೂಗುತಿ ಉಳಿಸಬೇಕೆಂದು ಮೊರೆ ಇಟ್ಟಳು ಮತ್ತು ತಾನು ತನ್ನ ಗಂಡನನ್ನು ಶೋಧಿಸಿ ತರುವುದಕ್ಕಾಗಿ ಪ್ರವಾಸಕ್ಕೆಕೊಳ್ಳುವೆನೆಂಬ ತನ್ನ ನಿರ್ಧಾರವನ್ನು ಮುಂದಿಟ್ಟಳು. ಆಗ ಅಣ್ಣ ದೇವೇಂದ್ರನು ಎಡೆತಡೆಯ ನುಡಿಯನ್ನಾಡುವನು:

"ನೀನು ಹೋಗಲು ಉಂಟೇ? ಗಂಡನನ್ನು ಪಾರುಮಾಡಿ ತರುವುದುಂಟೇ? ಅವನು ಯುದ್ಧದಲ್ಲಿ ಮಡಿದಿಲ್ಲ. ಅವನು ಇದ್ದಾನೆ. ಕಡಲಿನ ಹೊರಗೊಂದು ದ್ವೀಪದಲ್ಲಿ ಭಾರಿ ಚಾಣಾಕ್ಷಳಾದ ವೇಶ್ಯೆಯೊಬ್ಬಳು ಇದ್ದಾಳೆ. ಆಕೆ ಎಂತೆಂತಹ ಅರಸುಕುಮಾರರನ್ನು ತನ್ನದೊಂದು ಚದುರಂಗದಾಟದಲ್ಲಿ ಸೋಲಿಸಿ, ಅವರ ಹಡಗು, ಸರಂಜಾಮು, ಅಷ್ಟೈಶ್ವರ್ಯಗಳನ್ನು ದೋಚಿಕೊಂಡಿದ್ದಾಳೆ. ಅವರನ್ನು ತನ್ನ ಅರಮನೆ ಚಾಕರಿಗೆ ನೇಮಿಸಿಕೊಂಡಿದ್ದಾಳೆ. ಎಷ್ಟೋ ಮಂದಿಗಳನ್ನು ತನ್ನ ಹೂವಿನ ತೋಟಕ್ಕೆ ನೀರು ಹೊರಿಸುತ್ತಿದ್ದಾಳೆ. ಅವಳ ಚಾಕರಿ ತೊತ್ತಾಗಿ ನಿನ್ನ ಗಂಡ ಅವಳ ತೋಟದಲ್ಲಿ ದುಡಿದು ಸವೆಯುತ್ತಿದ್ದಾನೆಂಬುದು ನಿಸ್ಸಂಶಯ."

"ನಾನು ಹೋಗಿ ಅವರನ್ನು ಬಂಧಮುಕ್ತಮಾಡಿ ತರುವೆನು. ನಾನು ಹೋಗಿಯೇ ಸಿದ್ಧ. ನಾನು ಈ ದಿಸೆಯಲ್ಲಿ ಹೇಗೆ ಮುಂದುವರಿಯಬೇಕು? ನನಗೆ ದಾರಿ ಯಾವುದು? ಉಪಾಯ ಯಾವುದೆಂದು ಸೂಚಿಸಿರಿ."

ಅಣ್ಣನು ಮತ್ತೆ ಅವನ್ನೆಲ್ಲ ತಿಳಿಯ ಹೇಳುವನು. ಆ ಪ್ರಕಾರ ಜಗಪತಿ ಕುಂಕುಮ ತನ್ನ ಕೊರಳಿನ ಕರಿಮಣಿ, ಕಿವಿಯ ಓಲೆ, ಮೂಗಿನ ಮೂಗುತಿ ಕಳಚಿದಳು. ಇಜಾರು ತೊಟ್ಟಳು. ಕೈಗೆ "ಸೇರು" ಬಳೆ ತೊಟ್ಟಳು. ತಲೆಗೆ ಮುಂಡಾಸು ಏರಿಸಿದಳು. ಸೊಂಟಕ್ಕೆ ಮೂವತ್ತು ಮೊಳ ಹುರಿ ಹಗ್ಗ ಸುತ್ತಿ ಬಿಗಿದಳು. ಹಡಗು, ಜನಮಾಣಿ, ಸಾಹಿತ್ಯಗಳನ್ನು ಸಂಗ್ರಹಿಸಿಕೊಂಡಳು. ಮೂರು ಬಿಳಿ ಇಲಿಗಳನ್ನು ತನ್ನ ಸಂಗಡ ಜಪ್ಪಿಸಿ ಹಡಗದಲ್ಲಿ ಇಟ್ಟುಕೊಂಡಳು. ಹಡಗು ಚಲಿಸಿತು.

ಆ ದ್ವೀಪದ ದಡದಲ್ಲಿ ಹಡಗನ್ನು ನಿಲ್ಲಿಸಿದಳು. ವ್ಯಾಪಾರಿಯಂತೆ ನಟಿಸಿ, ಆ ಊರಿನ ಅಡಗುಲಜ್ಜಿಯೋರ್ವಳ ಮನೆಗೆ ಬಂದಳು. ಮುದುಕಿಯನ್ನು ಒಲಿಸಿಕೊಂಡು ಅಲ್ಲಿ ತಂಗಿದಳು. ಆಕೆಯಿಂದ ವೇಶ್ಯೆಯ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿದಳು.

ಮರುದಿನ ಜಗಪತಿಕುಂಕುಮ ವೇಶ್ಯೆ ಸಿದ್ದುವಿನ ಅರಮನೆಗೆ ನಡೆದಳು. ವೇಶ್ಯೆ ಸ್ವಾಗತಿಸಿದಳು. ಆದರೋಪಚಾರಗಳನ್ನು ಮಾಡಿದಳು.

ಬಳಿಕ ಹೀಗೆಂದು ನುಡಿದಳು:

"ನನ್ನ ದ್ವೀಪಕ್ಕೆ ಬಂದವರು ನನ್ನ ಅರಮನೆಗೆ ಬಂದುಕೊಳ್ಳದಿರುವುದಿಲ್ಲ. ನೀವು ನನ್ನ ಅರಮನೆಗೆ ಬಂದಿರಿ. ನಿಮ್ಮ ಹೆಸರೇನು?"

"ನಾನು ತುಳುನಾಡಿನ ಅರದ" "(ಅರಬಿ)."

"ಹಾಗಾದರೇ ನಾವಿಬ್ಬರೂ ಚದುರಂಗ ಆಡಬೇಕು. ನೀವು ಸೋತರೆ, ನಿಮ್ಮ ಹಡಗು, ಜನವಾಣಿ, ಸಂಪತ್ತೆಲ್ಲ ನನಗೆ. ನಾನು ಸೋತರೆ ನನ್ನದೆಲ್ಲ ಸಂಪತ್ತು, ಜನವಾಣಿ, ಒಂದಿಗೇ ನಾನು ಕೂಡಿ ನಿಮ್ಮ ಅಧೀನ. ಈ ಶರತ್ತಿನಿಂದ ನಮ್ಮ ಆಟ ಸಾಗತಕ್ಕದು."

"ಸೈ."

ಇಬ್ಬರೂ ಆಟಕ್ಕೆ ಕೂಡ್ರುವಾಗ ತುಳುನಾಡಿನ "ಅರದೆ" ಬೆಕ್ಕಿನ ತಲೆಯಲ್ಲಿ ಉರಿಯುವ ದೀಪವನ್ನು ಇರಿಸಿದನು. ಆಟ ಬಿರುಸಿಂದ ಸಾಗಿತು. ವೇಶ್ಯೆ ಸಿದ್ದು ಮೊದಲಿನ ಆಟದಲ್ಲಿ ಎಂದಿನಂತೆ ಜಯಹೊಂದುವ ಲಕ್ಷಣವನ್ನು "ಅರದ" ಕಂಡುಕೊಂಡನು. ತನ್ನ ಉಡಿಯಲ್ಲಿ ತೂರಿಕೊಂಡಿದ್ದ ಇಲಿಗಳಲ್ಲೊಂದನ್ನು ಅವಳಿಗೆ ಅರಿಯದಂತೆ ಬಿಟ್ಟನು. ಇಲಿ ಓಡುವುದನ್ನು ಕಂಡು, ಬೆಕ್ಕು ಸಟೆದು ಮುನ್ನುಗ್ಗಿತು. ದೀಪ ಕಳಚಿಕೊಂಡಿತು. ಈ ಮಬ್ಬಿನಲ್ಲಿ ಚದುರಂಗದ ದಳಗಳನ್ನು "ಅರದೆ" ತಿರುಗಿಸಿ ಇಟ್ಟನು. ಬಳಿಕ ಆ ಮೇಲಿನ ಎರಡು ಆಟಗಳನ್ನು ಅದೇ ರೀತಿ ಆಡಿ, ವೇಶ್ಯೆಯನ್ನು ಸೋಲಿಸಿ ವಿಜಯುಗಳಿಸಿದನು.

"ಏನು, ಸಿದ್ದು? ಹೇಳಿದ ಭಾಷೆ ಉಂಟಾ, ಇಲ್ಲಾ?"

"ಉಂಟು. ಈ ದಿನದ ರಾತ್ರಿ ನನ್ನ ಅರಮನೆಯಲ್ಲಿ ನೀವು ತಂಗಬೇಕು. ಇನ್ನೊಂದು ಪಂದ್ಯ ಉಂಟು."

"ಅರದೆ" ಒಡಂಬಟ್ಟು ತಂಗಿದನು. ಸಿದ್ದು ಇನ್ನೊಂದು ಆಟದಲ್ಲಿ ಈ ಆಸಾಮಿಯನ್ನು ಸೋಲಿಸುವ ಹಂಚಿಕೆಯನ್ನೊಂದನ್ನು ಕೈಕೊಂಡಳು. ಶಯ್ಯಾಗೃಹಕ್ಕೆ ಅವನನ್ನು ಕರದೊಯ್ದಳು. ಆದರೆ ಅಲ್ಲಿ ಶಯ್ಯೆಯಲ್ಲಿ ಅವನು ವೇಶ್ಯೆಯನ್ನು ಬಗ್ಗ ಬಂಧಿಸಿ ನುರುಗಿ ಪ್ರಾಣ ಸಂಕಟಕ್ಕೆ ಸಿಲುಕಿಸಿದ.

"ನನಗೆ ಎಷ್ಟೋ "ಅರದೆ"ಯರ ಸಂಪರ್ಕವಾಗಿದೆ. ಆದರೆ ಇಂತಹವನನ್ನು ನಾನು ಕಂಡಿಲ್ಲವಪ್ಪಾ! ಎಂತ ಸಿದ್ದು ಮನಸ್ಸಿನಲ್ಲೇ ಕೆಬ್ಬರಿಸಿದಳು.

ಮರುದಿನ ಬೆಳಗ್ಗೆ ಸಿದ್ದು "ಅರದೆ"ಗೆ ನುಡಿದಳು:

"ನಗನಾಣ್ಯಗಳ ರಾಶಿ ಮುಗುಚಿ ಹಡಗಿಗೆ ತುಂಬಿಸಿರಿ. ನಾನು ಕೂಡ ನಿಮಗೆ"

"ಅರದೆ" ಹೋಗಿ ತೋಟದಲ್ಲಿ ಹೂವಿಗೆ ನೀರೆರಚುತ್ತಿದ್ದ ಗಂಡನನ್ನು ಸಂಧಿಸಿ, ತನ್ನ ಗುರುತು ಪ್ರಕಟಿಸಿದಳು. ಮಹಾಲಿಂಗ ಸೆಟ್ಟಿ ಅತಿಶಯ ಸಂತೋಷದಿಂದ ವೇಷಧಾರಿ ಜಗಪತಿಕುಂಕುಮಳನ್ನು ಒರಸೆಳೆದುಕೊಂಡು ಅಪ್ಪಿದನು.

ಸೂಳೆಯ ಅರಮನೆಯಲ್ಲಿ ಬಂಧಿಗಳಾದ ರಾಜಕುಮಾರರೆಲ್ಲರನ್ನು ಜಗಪತಿಕುಂಕುಮಳು ಬಂಧಮುಕ್ತವಮಾಡಿ ಅವರವರ ರಾಜ್ಯಕ್ಕೆ ಕಳುಹಿಸಿದಳು. ವೇಶ್ಯೆಯ ಅಷ್ಟೈಶ್ವರ್ಯಗಳನ್ನೆಲ್ಲ ಹಡಗಿನಲ್ಲಿ ತುಂಬಿಸಿದಳು. ಬಳಿಕ ತನ್ನ ಗಂಡ ಹಾಗೂ ಸಿದ್ದುವಿನೊಂದಿಗೆ ತನ್ನ ದೇಶಕ್ಕೆ ಹೊರಟುಬರುವರು.

ಸಿದ್ದು ಮಹಾಲಿಂಗ ಸೆಟ್ಟಿಯ ಮನೆಯಲ್ಲಿ ಬಟ್ಟೆ ಒಗೆಯುವ, ಬಚ್ಚಲು ನೀರು ಕಾಯಿಸುವ ಚಾಕರಿ ಮಾಡಿದಳು. ಮಹಾಲಿಂಗ ಸೆಟ್ಟಿ ಮತ್ತು ಜಗಪತಿ ಕುಂಕುಮ ಸುಖ ಸಂತೋಷದಲ್ಲಿ ಇದ್ದರು.

ಅಷ್ಟರಲ್ಲಿ ಅವಳ ತಂದೆಯ ಅಳಿಯ ಮರೋಜಿ ಮಕ್ಕಲೆ, ಈ ಜಗಪತಿ ಕುಂಕುಮಳನ್ನು ಅಪಹರಿಸಬೇಕು, ಆಕೆ ಎಷ್ಟು ಗಡಸಿನ ಸ್ತ್ರೀ ಎಂಬುದನ್ನು ಪರಿಕಿಸಿ ನೋಡಬೇಕು ಎಂದು ನಿರ್ಧರಿಸಿದನಂತೆ. ಬಳೆಗಾರನ ವೇಷತೊಟ್ಟು ಜಗಪತಿಕುಂಕುಮಲಿರುವ ಅರಮನೆಗೆ ಬಂದನು.

"ಒಳ್ಳೆ ಒಳ್ಳೆ ಬಳೆ ಉಂಟು. ತೆಕ್ಕೊಳ್ಳಿರಿ, ಅಮ್ಮಾ" ಎಂದು ಬೆಸಸಿದನು.

"ನಾನು ಇಡುವುದಿಲ್ಲ. ಬಳೆ ಬೇಡ."

ಹೀಗೆಂದು ಅವಳು ನಿರಾಕರಿಸಿದಾಗ, ಹಠಕಟ್ಟಿ, ಒತ್ತಾಯದಿಂದ ಇಡಿಸುವ ಹಾಗೆ ಅವಳ ಕೈಗೆ ಇಡುವನು. ಬಳೆ ಇಡುವುದಕ್ಕೆ ಅವಳು ಕೂತಿದ್ದಾಗ, ಅವಳಿಗೆ ಮದ್ದು ಮಾಯೆ ಹಾಕುವನು.

ಅವನು ಬಳೆ ಇಟ್ಟು ಹೊರಡುವಾಗ, ಬೆನ್ನಲ್ಲೇ ಅವನನ್ನು ಅನುಸರಿಸಿ ಅವಳು ಹೋಗುವಳು.

ಜಗಪತಿಕುಂಕುಮಳನ್ನು ಮರೋಜಿ ಮಕ್ಕಲೆ ತನ್ನ ಅರಮನೆಗೆ ತಂದು, ಮದುವೆಯಾದನು. ಮುಂದೆ ಅವಳು ಇವನ ಮನೆ ಮಡದಿಯಾಗಿ, ಹೀಗೆ ಒಟ್ಟಿಗೆ ಇಬ್ಬರೂ ಇದ್ದರಂತೆ!

—ಎಸ್. ನಾರಾಯಣ,
ಮಂಗಳೂರು.

ಮೈಸೂರು ರಾಜ್ಯದಲ್ಲಿ ಬಳಸುವ
ಚುನಾವಣಾ ಚಿಹ್ನೆಗಳು

ಮುಂಬರಲಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಉಮೇದುವಾರರು ಬಳಸುವ ಚುನಾವಣಾ ಚಿಹ್ನೆಗಳನ್ನು ಸಹ ಪ್ರಕಟಿಸಿದೆ. ಚುನಾವಣಾ ಮಂಡಲಿಯು ಮೈಸೂರು ರಾಜ್ಯದಲ್ಲಿ ನಿಗದಿ ಮಾಡಿರುವ ಚಿಹ್ನೆಗಳು ಈ ರೀತಿ ಇರುವುವು:

ಕೊಂಗ್ರೆಸ್ ಪಕ್ಷಕ್ಕೆ "ನೊಗವನ್ನು ಹೊತ್ತಿರುವ ಎರಡು ಎತ್ತುಗಳು"— ಇರುವ ಚಿಹ್ನೆಯನ್ನೂ, ಪ್ರಜಾ-ಸೋಶಿಯಲಿಸ್ಟ್ ಪಕ್ಷಕ್ಕೆ "ಗುಡಿಸಲು"— ಇರುವ ಚಿಹ್ನೆಯನ್ನೂ ನಿಗದಿ ಮಾಡಲಾಗಿದೆ. ಈ ಚಿಹ್ನೆಗಳನ್ನು ಈ ಎರಡು ರಾಜಕೀಯ ಪಕ್ಷಗಳಿಗಾಗಿ ಮೀಸಲಿರಿಸಲಾಗಿದ್ದು, ಇವನ್ನು ಮತ್ತಾವ ಉಮೇದುವಾರರಿಗೂ ಹಂಚುವುದಿಲ್ಲ.

ರಾಜ್ಯಕ್ಕೆ ಹಂಚಿರುವ ಸ್ವತಂತ್ರವಾದ ಚಿಹ್ನೆಗಳ ಸಂಖ್ಯೆ 9. ಈ ಚಿಹ್ನೆಗಳಾವುವೆಂದರೆ: (1) ಧಾನ್ಯದ ತೆನೆ ಮತ್ತು ಕುಡುಗೋಲು (ಕಮ್ಯುನಿಸ್ಟ್ ಪಕ್ಷ); (2) ದೀಪ (ಜನಸಂಘ); (3) ಮರ (ಸೋಶಿಯಲಿಸ್ಟ್ ಪಕ್ಷ); (4) ನಕ್ಷತ್ರ (ಸ್ವತಂತ್ರ ಪಕ್ಷ); (5) ಆನೆ (ರಿಪಬ್ಲಿಕನ್ ಪಕ್ಷ); (6) ಬೈಸಿಕಲ್, (7) ಹೂವು, (8) ತಕ್ಕಡಿ ಮತ್ತು (9) ಎರಡು ಎಲೆಗಳು.

ಕೇಂದ್ರ ಆರೋಗ್ಯ ಮಂತ್ರಿಗಳ

ಜಿಲ್ಲಾ ಸಂಚಾರ

ಭಾರತ ಕೇಂದ್ರ ಸರಕಾರದ ಆರೋಗ್ಯ ಮಂತ್ರಿ ಶ್ರೀ| ಡಿ ಪಿ ಕರಮರಕರ್‌ರವರು ಕಳೆದ ತಾ. 9ರಂದು ವಿಮಾನ ಮೂಲಕ ಮಂಗಳೂರಿಗೆ ಆಗಮಿಸಿದವರು ತಾ 10ರಂದು ಸಂಜೆ ರೈಲಿನಲ್ಲಿ ಹಿಂತೆರಳಿದರು. ಅವರು ಜಿಲ್ಲಾ ಸಂಚಾರ ಕೈಕೊಂಡಿದ್ದು ಸುರತ್ಕಲ್, ಉಡುಪಿ, ಕಾರ್ಕಳ ಮತ್ತು ಮೂಡಬಿದ್ರೆಗೆ ಸಂದರ್ಶನಗಳನ್ನು ಕೊಟ್ಟಿದ್ದರು.

ಮಂಗಳೂರಲ್ಲಿ: ತಾ. 9ರಂದು ಸಾಯಂಕಾಲ ಮಂಗಳೂರು ಸರಕಾರೀ ಕೊಲೇಜ್ ಸಭಾಭವನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯಸಚಿವರು ಹನ್ನೆರಡನೇ ಕ್ಷಯರೋಗ ನಿರೋಧ ಸೀಲುಗಳ ಮಾರಾಟ ಚಳವಳವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಂಚವಾರ್ಷಿಕ ಯೋಜನೆಗಳ ಕುರಿತು ಸ್ಥೂಲ ವಿಮರ್ಶೆಯನ್ನು ಶ್ರೀ| ಡಿ. ಪಿ. ಕರಮರಕರರು ಮಾಡಿದರು. 'ಸರಕಾರ ಬೇರೆ, ಜನತೆ ಬೇರೆ ಎಂದು ತಿಳಿಯುವ ಕಾಲ ಇದಲ್ಲ. ಸರಕಾರವೆಂದರೆ ಜನರ ಸೇವೆ ಮಾಡಲು ಕಲ್ಪಿಸಿದ ಒಂದು ಯಂತ್ರ. ಆದುದರಿಂದ ಜನತೆಯು ಸೇವೆಮಾಡಲು ಇರುವ ಸರಕಾರದ ಕೆಲಸಗಳಲ್ಲಿ ಜನತೆ ಸಹಕರಿಸುವುದು ಅತ್ಯಗತ್ಯ' ಎಂಬುದಾಗಿಯೂ ಅವರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಆರಂಭದಲ್ಲಿ ಮಂಗಳೂರು ನಗರಸಭಾಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಸ್ವಾಗತಿಸಿ, ಕೊನೆಯಲ್ಲಿ ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷ ಶ್ರೀ| ಟಿ. ಎ. ಪೈಯವರು ಧನ್ಯವಾದವಿತ್ತರು.

ಜಿಲ್ಲಾ ಕೊಂಗ್ರೆಸ್ ಕಚೇರಿಯಲ್ಲಿ ಜಿಲ್ಲೆಯ ಕೊಂಗ್ರೆಸ್ ಕಾರ್ಯಕರ್ತರುಗಳನ್ನುದ್ದೇಶಿಸಿಮಾಡಿದ ಭಾಷಣದಲ್ಲಿ ಶ್ರೀ| ಕರಮರಕರರು, "ದೇಶದಲ್ಲಿ ಬಡತನದ ವಿರುದ್ಧ ನಡೆಯುವ ಹೋರಾಟದಲ್ಲಿ ಕೊಂಗ್ರೆಸಿಗರು ದುಡಿಯಬೇಕು. ಜನಾಂಗವನ್ನು ದುಡಿಸಬೇಕು. ಸರಕಾರದ ಬೆನ್ನೆಲುಬು ಪಕ್ಷ. ಅದು ಶುದ್ಧವಾಗಿದ್ದು ಬಲವಿದ್ದಷ್ಟು ಸರಕಾರದ ಬಲ ವೃದ್ಧಿಯಾಗುವುದು" ಮುಂತಾಗಿ ನುಡಿದರು. ಶ್ರೀ| ಟಿ ಎ. ಪೈಗಳು ಸ್ವಾಗತಿಸಿ ಶ್ರೀ| ಎಂ. ರಮಾನಾಥರು ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ: "ದೇಶದ ಪ್ರಗತಿಯನ್ನೇ ಪ್ರಧಾನವಾಗಿಟ್ಟುಕೊಂಡು ಕಾರ್ಯೋನ್ಮುಖವಾದ ಈ ಸಂದರ್ಭದಲ್ಲಿ ಆಂತರಿಕ ಕಲಹಗಳಿಂದ ಹಾನಿಯಿದೆ. ಜಿಲ್ಲೆಯಲ್ಲಿ ಹಾಗು ರಾಜ್ಯದಲ್ಲಿ ಒಳಜಗಳಗಳು ಇರದಂತೆ ನೋಡಿಕೊಳ್ಳುವುದು ಅತ್ಯಗತ್ಯ. ಆಗಾಗ ಮಂತ್ರಿಗಳ ಬದಲಾವಣೆ ರಾಜ್ಯದ ಹಿತದೃಷ್ಟಿಯಲ್ಲಿ ಎಳ್ಳಷ್ಟೂ ಯೋಗ್ಯವಲ್ಲ. ಮಂತ್ರಿ ಪದವಿಯು ಅಧಿಕಾರದ ಆಸೆ ತೃಪ್ತಿಮಾಡಲಿಕ್ಕಿರುವಂತಹದಲ್ಲ ಎಂದು ಹೇಳುವ ಸಾವಿರಾರು ಕನ್ನಡಿಗರು ಮುಂದೆ ಬರಬೇಕು" ಎಂಬುದಾಗಿ ಕೇಂದ್ರ ಆರೋಗ್ಯ ಸಚಿವರು ಉಡುಪಿ ರಾಮಕೃಷ್ಣ ಥಿಯೇಟರಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ಹೇಳಿದರು. ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷ ಶ್ರೀ| ಟಿ. ಎ. ಪೈಯವರು ಸಭಾಧ್ಯಕ್ಷತೆ ವಹಿಸಿದ್ದರು. ಉಡುಪಿಯು ವಿಶ್ವವಿದ್ಯಾನಿಲಯವಾಗಲೆಂದು ಸಚಿವರು ಈ ಸಂದರ್ಭದಲ್ಲಿ ಹಾರೈಸಿದರು.

ಮಂಗಳೂರಿಂದ ಉಡುಪಿಗೆ ಹೋಗುವಾಗ ದಾರಿಯಲ್ಲಿ ಮಾನ್ಯಸಚಿವರು ಸುರತ್ಕಲ್ ರೀಜಿನಲ್ ಇಂಜಿನಿಯರಿಂಗ್ ಕೊಲೇಜ್, ಪಡುಬಿದ್ರೆ, ಕಾಪು ಮತ್ತು ಕಟಪಾಡಿಗಳಲ್ಲಿರುವ ಗ್ರಾಮೀಣ ಕುಟುಂಬ ಯೋಜನಾ ಕೇಂದ್ರಗಳು ಮತ್ತು ಮಾತೃತ್ವ ಕೇಂದ್ರಗಳನ್ನು ಸಂದರ್ಶಿಸಿ ಅಲ್ಲಿಯ ಚಟುವಟಿಕೆಗಳನ್ನು ಪರಿಶೀಲಿಸಿದರು.

ಮಣಿಪಾಲದಲ್ಲಿ: ಉಡುಪಿಯ ತಮ್ಮ ಕಾರ್ಯಕ್ರಮ ಮುಗಿಸಿಕೊಂಡು ಮಾನ್ಯಸಚಿವರು ಮಣಿಪಾಲಕ್ಕೆ ಆಗಮಿಸಿದಾಗ ಡಾ| ಮಾಧವ ಪೈಯವರು ಅವರನ್ನು ಸ್ವಾಗತಿಸಿ ಕಸ್ತೂರ್‌ಬಾ ಮೆಡಿಕಲ್ ಕೊಲೇಜ್, ಕಸ್ತೂರ್‌ಬಾ ಮೆಟರ್ನಿಟಿ ಹೋಂ ಮತ್ತು ಕಸ್ತೂರ್‌ಬಾ ಜನರಲ್ ಆಸ್ಪತ್ರೆ ಈ ಸಂಸ್ಥೆಗಳಿಗೆ ಕರೆದೊಯ್ದರು. ಕಸ್ತೂರ್‌ಬಾ ಜನರಲ್ ಆಸ್ಪತ್ರೆಯಲ್ಲಿ ನಡೆದ ಸಮಾರಂಭದಲ್ಲಿ ಶ್ರೀ| ಕರಮರಕರರು 'ಮೆಡಿಕಲ್ ಎಸಿಸ್ಟ್ಯಾಂಟ್ ಎಂಡ್ ಮೆಡಿಕಲ್ ಟೆಕ್ನೊಲೊಜಿಸ್ಟ್' ಕೋರ್ಸನ್ನು ಉದ್ಘಾಟಿಸಿದರು. ಇಲ್ಲಿ ಮಾಡಿದ ಭಾಷಣದಲ್ಲಿ ಶ್ರೀ| ಕರಮರಕರರು ರಕ್ತದಾನ ಚಳವಳದ ಕುರಿತಾಗಿ ಮಾತಾಡಿದರು

ಕಾರ್ಕಳದಲ್ಲಿ: "ಯೋಜನೆ ಒಬ್ಬರ ಕೆಲಸವಲ್ಲ ಜನತೆ ಸಾಮೂಹಿಕವಾಗಿ ಏಕಬುದ್ಧಿಯಿಂದ ಕೈಕೊಂಡರೇನೆ ಅದು ಯಶಸ್ವಿಯಾಗುವುದು. ಯೋಜನೆಯ ಮೂಲಕ ರಾಷ್ಟ್ರದ ಪ್ರಗತಿಯ ಕಾರ್ಯದಲ್ಲಿ ಸೇವೆ ಸಲ್ಲಿಸಲು ಜನತೆ ಮುಂದಾಗಬೇಕು" ಎಂಬುದಾಗಿ ಕಾರ್ಕಳ ಜೈಹಿಂದ್ ಟೊಕಿಸಿನಲ್ಲಿ ನೆರೆದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿಮಾಡಿದ ಭಾಷಣದಲ್ಲಿ ಶ್ರೀ| ಡಿ. ಪಿ. ಕರಮರಕರರು ಹೇಳಿದರು. ಮಾನ್ಯಸಚಿವರು ಕಾರ್ಕಳಕ್ಕೆ ಆಗಮಿಸಿದೊಡನೆ, ತಾಲೂಕು ಬೋರ್ಡು ಅಧ್ಯಕ್ಷ ಶ್ರೀ| ಎಸ್. ಎಂ. ಅಡ್ಯಂತಾಯ, ಮಂಡಲ ಕೊಂಗ್ರೆಸ್ ಅಧ್ಯಕ್ಷ ಶ್ರೀ| ಎಂ. ಜಿ. ಆರ್. ಸಂಪಿಗೆತ್ತಾಯ ಮೊದಲಾದವರು ಅವರನ್ನು ಸ್ವಾಗತಿಸಿದ್ದರು.

ಮೂಡಬಿದ್ರೆಯಲ್ಲಿ: ಕಾರ್ಕಳದ ಕಾರ್ಯಕ್ರಮ ಮುಗಿಸಿ ಮೂಡಬಿದ್ರೆಗೆ ಬಂದ ಕೇಂದ್ರ ಆರೋಗ್ಯ ಸಚಿವರನ್ನು ಸ್ಥಳೀಯ ಮಂಡಲ ಕೊಂಗ್ರೆಸ್ ಅಧ್ಯಕ್ಷ ಶ್ರೀ| ಜಿ. ವಾಸುದೇವ ಪೈ, ತಾಲೂಕು ಬೋರ್ಡು ಸದಸ್ಯ ಶ್ರೀ| ಎಸ್. ಡಿ. ಸಾಮ್ರಾಜ್ಯ ಮೊದಲಾದವರು ಆದರದಿಂದ ಸ್ವಾಗತಿಸಿದರು. ಇಲ್ಲಿಯ ಸಮಾಜ ಮಂದಿರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಮಾನ್ಯ ಮಂತ್ರಿಗಳು, ಸಮಾಜ ಮಂದಿರ ಚಟುವಟಿಕೆಗಳ ಕುರಿತು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ, "ಮಾನಸಿಕ ವಿಕಾಸಕ್ಕೆ ಅಗತ್ಯವಿರುವ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಈ ತರದ ಸಂಸ್ಥೆಗಳಿರುವುದು ತುಂಬಾ ಸಂತೋಷ" ಎನ್ನುತ್ತ ಸಂಸ್ಥೆ ನಡೆಸುತ್ತಿರುವ ಪುಸ್ತಕಾಲಯಕ್ಕೆ, ಆರೋಗ್ಯಾಭಿವೃದ್ಧಿಗೆ ಸಂಬಂಧಿಸಿದ ಪುಸ್ತಕಗಳನ್ನು ಪಡೆಯಲು ತಾನು ರೂ. 1000 ಕೊಡುವುದಾಗಿ ಆಶ್ವಾಸನೆಯಿತ್ತರು.

ಮೂಡಬಿದ್ರೆಯಿಂದ ಮಾನ್ಯ ಮಂತ್ರಿಗಳು ಮಂಗಳೂರಿಗೆ ಮರಳಿ ಸಂಜೆ ರೈಲಿನ ಮೂಲಕ ಎರ್ನಾಕುಳಮಿಗೆ ಪ್ರಯಾಣ ಮುಂದುವರಿಸಿದರು.

— —

[2ನೇ ಪುಟದಿಂದ ಮುಂದುವರಿದಿದೆ]

ನಾದ ಭೋಜವಂಶಜ ರಾಜಭೀಷ್ಮಕನು ಮಗಧರಾಜ ಜರಾಸಂಧನ ಭಕ್ತನಾಗಿರುವನು. ಅಲ್ಲದೆ ಅವನ ಸೇನೆಯು ಅಪಾರ ಮತ್ತು ಅನಂತರಾಗಿದೆ. ಪಾಂಚಾಲಬೇಶಿಯ ಸಮಸ್ತರಾಜರು ಇವನ ಭಯದಿಂದ ತಮ್ಮ ರಾಜ್ಯವನ್ನೆಲ್ಲಾ ತ್ಯಜಿಸಿ ದಿಕ್ಕುಪಾಲಾಗಿರುವರು. ನಾವೆಲ್ಲರೂ ಇವನ ಬಾಧೆಯನ್ನು ತಡೆಯಲಾರದೆ ಮಥುರೆಯನ್ನೇ ಬಿಟ್ಟು ದ್ವಾರಕೆಯನ್ನು ಸೇರಬೇಕಾಯಿತು. ಇವನನ್ನು ಜಯಿಸದೆ ರಾಜಸೂಯ ಯಾಗವನ್ನು ಹೇಗೆ ಮಾಡುವಿ? ಜರಾಸಂಧನ ಸಂಹಾರಕ್ಕೆ ಏನು ಪ್ರಯತ್ನಮಾಡಿರುವಿ? ಮೊದಲು ಅದನ್ನು ಯೋಚಿಸು" ಎಂದು ಶ್ರೀಕೃಷ್ಣನು ನುಡಿದನು.

ಈ ಮಾತಿಗೆ ಯುಧಿಷ್ಠಿರನು, "ಶ್ರೀಕೃಷ್ಣ! ನನಗೂ ಜರಾಸಂಧನ ಪ್ರಭಾವವು ತಿಳಿದಿದೆ. ಆದರೆ ನಾವೆಲ್ಲರೂ ನಿನ್ನನ್ನೇ ನಂಬಿದ್ದೇವೆ" ನುಡಿದನು.

"ಮಹಾರಾಜ! ಶ್ರೀಕೃಷ್ಣನಲ್ಲಿ ನೀತಿ, ನನ್ನಲ್ಲಿ ಬಲ, ಮತ್ತು ಅರ್ಜುನನಲ್ಲಿ ವಿಜಯಶಕ್ತಿ ಇವೆ. ಇವು ಮೂರು ಸೇರಿದರೆ ಮಗಧರಾಜ ಜರಾಸಂಧನ ವಧೆಯಾಗಿಯೇ ಆಗುವುದು. ಗೋವಿಂದ! ನಿನ್ನ ಅನುಗ್ರಹ ಬಿದ್ದರೆ ಧರ್ಮರಾಜ ಯುಧಿಷ್ಠಿರನು ಏನನ್ನು ಪಡೆಯಲಾರನು?

ಜಯೋಽಸ್ಮಾಕಂ ಹಿ ಗೋವಿಂದ
ಯೇಷಾಂ ನಾಥೋ ಭವಾನ್ ಸದಾ॥

ನೀನು ನಮ್ಮ ರಕ್ಷಕನಾಗಿರುವುದರಿಂದ ಪಾಂಡವರಿಗೆ ಜಯವು ನಿಶ್ಚಿತವು" ಎಂದು ಭೀಮಸೇನನು ವಿಜ್ಞಾಪಿಸಿದನು.

ಆ ಮಾತಿಗೆ ಶ್ರೀಕೃಷ್ಣನು, "ರಾಜನೆ! ಯುವನಾಶ್ವನ ಪುತ್ರ ಮಾಂಧಾತನು ಶತ್ರುಗಳನ್ನು ಜಯಿಸಿಯೇ ಸಮ್ರಾಟನಾದನು. ಭಗೀರಥನು ಪ್ರಜೆಗಳನ್ನು ಪಾಲಿಸಿ ಸಮ್ರಾಟನಾದನು. ಕಾರ್ತವೀರ್ಯನು ತಪೋಬಲದಿಂದ ಸಮ್ರಾಟನಾದನು. ತನ್ನ ಬಲದಿಂದಲೇ ಭಾರತನು ಸಮ್ರಾಟನಾದನು. ಇವರೆಲ್ಲರೂ ಒಂದೊಂದೇ ಗುಣದಿಂದ ಸಮ್ರಾಟರಾದರು. ಆದರೆ ನೀನು ಸಂಪೂರ್ಣರೂಪದಿಂದ ಸಮ್ರಾಟನಾಗಲು ಬಯಸುತ್ತಿರುವಿ. ಸಾಮ್ರಾಜ್ಯಪ್ರಾಪ್ತಿಗೆ ಪಂಚಗುಣಗಳು ಅವಶ್ಯವು. ಅವು ಯಾವುವೆಂದರೆ, ಶತ್ರುವಿಜಯ, ಪ್ರಜಾಪಾಲನ, ತಪಃಶಕ್ತಿ, ಧನಸಮೃದ್ಧಿ ಮತ್ತು ಉತ್ತಮ ನೀತಿ" ಇವೆಲ್ಲವೂ ನಿನ್ನಲ್ಲಿ ಸಂಪನ್ನವಾಗಿವೆ. ಆದರೆ ಭರತಶ್ರೇಷ್ಠ! ಬೃಹದ್ರಥನ ಮಗ ಜರಸಂಧನು ಪ್ರತಿಬಂಧಕನಾಗಿರುವನು.

ಧರ್ಮರಾಜನು "ಶ್ರೀಕೃಷ್ಣನೇ ನಾನು ಸ್ವಾರ್ಥಸಾಧನಕ್ಕಾಗಿ ಕೇವಲ ಸಾಹಸದಿಂದ ಜರಾಸಂಧನನ್ನು ಹೇಗೆ ಸಂಹರಿಸಲಿ? ಭೀಮಸೇನ ಮತ್ತು ಅರ್ಜುನ ಇವರಿಬ್ಬರೂ ನನ್ನ ಕಣ್ಣಾಗಿರುವರು. ನೀನೇ ಮನಸ್ಸಾಗಿರುವಿ. ನನ್ನ ಮನಸ್ಸು ಮತ್ತು ನೇತ್ರಗಳನ್ನು ಕಳೆದುಕೊಂಡು ವಿಜಯವನ್ನು ಹೇಗೆ ಪಡೆಯುವುದು?

ಭೀಮಾರ್ಜುನಾವುಭೌ ನೇತ್ರೇ ಮನೋ
ಮನ್ಯೇ ಜನಾರ್ದನಮ್ ।
ಮನಶ್ಚಕ್ಷುರ್ವಿಹೀನಸ್ಯ ಕೀದೃಶಂ
ಜೀವಿತಂ ಭವೇತ್ ॥ ೧೬-೨.

ಭೀಮಸೇನ ಮತ್ತು ಅರ್ಜುನ ಇವರಿಬ್ಬರೂ ನನ್ನ ನೇತ್ರಗಳು ಮತ್ತು ಜನಾರ್ದನನ್ನೇ ನನ್ನ ಮನಸ್ಸು ಎಂದು ತಿಳಿದಿದ್ದೇನೆ. ಮನಸ್ಸು ಮತ್ತು ಕಣ್ಣುಗಳನ್ನು ಕಳೆದು ಎಂತಹ ಜೀವನ ಸಾಧ್ಯವು? ನನ್ನ ಮನಸ್ಸು ನಿರುತ್ಸಾಹಗೊಂಡಿದೆ. ಇದ್ದರಿಂದ ರಾಜಸೂಯದ ಅನುಷ್ಠಾನದ ವಿಚಾರವನ್ನೇ ಬಿಟ್ಟು ಬಿಡುವುದು ಉತ್ತಮವೆಂದು ತಿಳಿಯುತ್ತೇನೆ" ಎಂದು ನಿರುತ್ಸಾಹದ ಮಾತನಾಡಿದನು.

ಆಗ ಅರ್ಜುನನು, "ರಾಜ ಹಾಗನ್ನಲಾಗದು! ನಿನ್ನ ಇಚ್ಛೆಗೆ ನಾನು ಅನುಕೂಲಿನಾಗಿರುವೆನು. ನಮ್ಮ ರಾಜಸೂಯ ಯಜ್ಞವು ನೆರವೇರಬೇಕಾದರೆ, ಜರಾಸಂಧರ ವಧೆಯು ಅಗತ್ಯವಾದರೆ, ಸೆರೆಹಿಡಿಯಲ್ಲಿರುವ ರಾಜರ ವಿಮೋಚನೆಯಾಗುವುದಿಲ್ಲವೇ? ಇದಕ್ಕಿಂತ ಉತ್ತಮ ರಾಜಕಾರ್ಯವೇನಿದೆ? ಯಜ್ಞದ ಸಂಕಲ್ಪವನ್ನು ನೀನು ತ್ಯಜಿಸಿದರೆ ನಮ್ಮ ಬಲಹೀನತೆಯನ್ನು ನಾವು ಪೂಜಿಸಿದಂತಾಗುವುದು. ಸಾಮ್ರಾಜ್ಯ ಪ್ರಾಪ್ತಿಗಾಗಿ ನಾವು ಶತ್ರುಸಂಹಾರಕ್ಕೆ ಸಿದ್ಧರಾಗಿರುವೆವು" ಎಂದು ವೀರರಿಗೆ ಭೂಷಣವಾದ ವಚನವನ್ನಾಡಿದನು.

ವಾಸುದೇವನು, "ರಾಜನೆ! ಅರ್ಜುನನ ವೀರವಚನವನ್ನು ಕೇಳಿದಿಯಾ?"

ನಸ್ಮ ಮೃತ್ಯುಂ ವಯಂ ವಿದ್ಮ ರಾತ್ರೌ
ವಾ ಯದಿ ವಾ ದಿವಾ ।
ನ ಚಾಪಿ ಕಂಚಿದಮರ ಮಯುದ್ಧೇ
ನಾನುಶುಶ್ರುಮ ॥ ೧೭-೨.

ಮಹಾರಾಜ, ನಮಗೆ ಅದು ಮೃತ್ಯು ಸಂಭವಿಸುವುದೆಂದು ತಿಳಿಯದು? ರಾತ್ರಿಯಲ್ಲಿ ಅಥವಾ ಹಗಲಿನಲ್ಲಿ ಎಂದು ಹೇಳಲು ಬರುವುದಿಲ್ಲ. ಅಲ್ಲದೆ ಯುದ್ಧಮಾಡದಿದೆ ಕುಳಿತವನು ಅಮರನಾಗಿರುವನೆಂದು ನಾವು ಕೇಳಿರುವುದಿಲ್ಲ. ನಾವು ಜರಾಸಂಧನೊಡನೆ ಯುದ್ಧಮಾಡಿ ಮಡಿದರೆ, ನಮಗೇನು ಹಾನಿಯಿಲ್ಲವು. ಜ್ಞಾತಿಕ್ಷತ್ರಿಯರ ವಿಮೋಚನೆಗಾಗಿ ಮಡಿಯುವುದರಿಂದ ಸ್ವರ್ಗ ಪ್ರಾಪ್ತಿಯು ಖಂಡಿತವು. ಭೀಮಸೇನನು ಹೇಳಿದಂತೆ

ಮಯಿ ನೀತಿರ್ಬಲಂ ಭೀಮೇ ರಕ್ಷಿತಾ
ಚಾವಯೋರ್ಜಯ ।
ಮಾಗಧಂ ಸಾಧಯಿಷ್ಯಾಮ ಇಷ್ಟಿಂ
ತ್ರಯ ಇವಾಗ್ನಯಃ ॥ ೨೦-೩.

ನನ್ನಲ್ಲಿ ನೀತಿ, ಭೀಮನಲ್ಲಿ ಬಲ ಇದೆ. ಅರ್ಜುನನಲ್ಲಿ ನಮ್ಮ ರಕ್ಷಣಾ ಸಾಮರ್ಥ್ಯವಿದೆ. ಇವು ಮೂರು ಅಗ್ನಿಗಳಿಂದ ಯಜ್ಞಸಿದ್ಧಿಯಾಗುವುದು. ನಾವು ಸೇರಿ ಜರಾಸಂಧನ ವಧೆಯಕಾರ್ಯವನ್ನು ಪೂರ್ಣಗೊಳಿಸುವೆವು ಎಂದನು.

ಆ ಪ್ರಕಾರ ಎಲ್ಲರ ಬೆಂಬಲದಿಂದ ಯುಧಿಷ್ಠಿರನು ರಾಜಸೂಯ ದೀಕ್ಷೆಯನ್ನು ಕೈಗೊಂಡನು.

— —

ಲೇಖಾಂಕ ೮೧೮.

ಶುಕ್ರ ಸ್ವರೂಪ—೪.

(ಎಂ. ಸುಬ್ರಾಯನ್)

ಶುಕ್ರ ಪೂರ್ವವಕ್ತ್ರಃ ಶುಕ್ರ ವೈಶ್ಯಃ
ಬುಧ ಶುಕ್ರೌಚ ಮಧ್ಯಮೌ.

(ಜಯದೇವ)

ಶುಕ್ರನಿಗೆ ಪೂರ್ವಮುಖ; ವೈಶ್ಯಗ್ರಹ; ಬುಧ ಶುಕ್ರರು ಮಧ್ಯಮಯೋಗ ಪ್ರಮಾಣದವರು. ಮಂತ್ರೇಶ್ವರನು ಫಲದೀಪಿಕೆಯಲ್ಲಿ ಶುಕ್ರನಿಗೆ ನೃತ್ಯಶಾಲೆ, ಲಕ್ಷ್ಮೀ ದೇವತೆ ಕೀಕಟದೇಶ, ಲೋಹ, ಬೆಳ್ಳಿ, ಲತಾಕಾರಕ, ಪುಷ್ಪವೃಕ್ಷ ಎಂದು ಮೊದಲಾಗಿ ಹೇಳಿರುವನು

ನಮ್ಮ ಪ್ರಾಚೀನರು ಕಾಮಕಾರಕನೆಂದು ಹೇಳಲು ಸೂರ್ಯಾಸ್ತಮಾನಾನಂತರ ತೋರುವುದೇ ಕಾರಣವಾಗಿರುತ್ತದೆ. ಶುಕ್ರನು ಒಳುಪಾಗಿ ತೋರುವುದರಿಂದಲೇ ಶ್ವೇತವರ್ಣವೆಂದು ಹೇಳಿರುವರು. ಕಪ್ಪುವರ್ಣವೆಂದು ಇನ್ನು ಕೆಲವರು ಹೇಳಿದ್ದೂ ಇದೆ. ಲಗ್ನ ಅಥವಾ ಸಪ್ತಮದಲ್ಲಿ ಶುಕ್ರನಿದ್ದವರು ಕಪ್ಪು ವರ್ಣದವರಾಗಿ ಕಂಡುಬರುವುದುಂಟು. ಲಗ್ನದಲ್ಲಿ ಶುಕ್ರನಿದ್ದರೆ ಹೆಂಡತಿಯ ವರ್ಣ ಕಪ್ಪಾಗಿರುವುದು. ಅಂತೆಯೇ ಸ್ತ್ರೀ ಜಾತಕದಲ್ಲಿ ಲಗ್ನದಲ್ಲಿ ಶುಕ್ರನಿದ್ದರೆ ಕಪ್ಪು ಬಣ್ಣದ ಗಂಡನಾಗುವನು. ವಿಚಿತ್ರ ವರ್ಣದ ಬಟ್ಟೆ ಶುಕ್ರನಿಗೆ ಹೇಳಿರುವರು. ಇಂದು ಪೋಷಾಕಿನ ಯುಗ. ಇಂದಿನ ತರುಣತರುಣಿಯರು ಧರಿಸುತ್ತಿರುವ ಉಡುಪು ಬೇರೆಬೇರೆ ಬಣ್ಣದವುಗಳಿರುತ್ತವೆ. ಅದೂ ಅಲ್ಲದೆ ಒಬ್ಬೊಬ್ಬರ ಉಡುಪಿನ ಬಣ್ಣ, ಉಡುಪಿನ ರೀತಿಗಳು ಬೇರೆಬೇರೆಯಾಗಿಯೇ ತೋರಿಬರುವವು. ಶುಕ್ರನ ಸ್ಥಾನ ಕಾಲಚಕ್ರದಲ್ಲಿ ದ್ವಿತೀಯ ಸ್ಥಾನವಾಗಿರುವುದು. ವೃಷಭ ದ್ವಿತೀಯ ರಾಶಿ. ವೃಷಭ ಶಬ್ದಕ್ಕೆ ಎತ್ತು ಎಂಬ ಅರ್ಥ. ಎತ್ತುಗಳಲ್ಲಿ ಎಷ್ಟು ಬಣ್ಣದವುಗಳಿಲ್ಲ. ದನಕರುಗಳಲ್ಲಿ ಬೇರೆ ಬೇರೆ ಬಣ್ಣದವು ಇರುವವು. ಇದರಿಂದಲೇ ಶಾಸ್ತ್ರಕಾರರು ಚಿತ್ರವಿಚಿತ್ರ ಬಣ್ಣಗಳನ್ನು ಶುಕ್ರನಿಗೆ ಹೇಳಿರುವರು. ಚಿತ್ರಬಣ್ಣದ ಉಡುಗೆಗಳನ್ನು ಧರಿಸಲು ದ್ವಿತೀಯದ ಶುಕ್ರನೇ ಕಾರಣನಾಗುವನು. ಶುಕ್ರನು ವೀರ್ಯಕಾರಕನು. ವೀರ್ಯ ಈತನಿಗೆ ಧಾತು. ತುಲಾ ಕಾಲಚಕ್ರದ ಸಪ್ತಮ ಸ್ಥಾನ. ತುಲಾ ಸಪ್ತಮ ಸ್ಥಾನವಾಗಿ ಶುಕ್ರನ ಮನೆಯಾದುದರಿಂದಲೇ ವೀರ್ಯದ ವಿಚಾರವನ್ನು ಶುಕ್ರನಿಂದ ಹೇಳಲಾಗಿದೆ. ಮಾನವನ ವೀರ್ಯ ಸ್ಥಿತಿ ಪ್ರಬಲವಾದುದೇ? ಕಾಮಕಾರಕವಾದ ವೀರ್ಯದ ಉತ್ತೇಜನೆ ಹೇಗಿರುವುದೆಂದು ತಿಳಿಯಲು ಸಪ್ತಮವನ್ನು ನೋಡಬೇಕು.

ಶುಕ್ರನಿಗೆ ಶಯನಸ್ಥಾನವನ್ನು ಹೇಳಿರುವರು. ನಾಲ್ಕು ಪೂರ್ಣವಾದ ಮನೆ. ಗೃಹಸ್ಥಾನ. ಅದರ ಪೂರ್ವ ಕೇಂದ್ರವಾದ ವ್ಯಯ ಗಂಡಹೆಂಡಿರುವ ನೆಲಸುವ ಕೋಣೆ. ನೈಸರ್ಗಿಕ ಕುಂಡಲಿಯಲ್ಲಿ ಮೀನವೇ ವ್ಯಯಸ್ಥಾನ. ಮೀನದ ಅಧಿಪತಿ ಗುರು. ಉಚ್ಚಸ್ಥಾನ ಶುಕ್ರನಿಗೆ ಮೀನ. ಉಚ್ಚದ ದ್ವಾದಶದ ಶುಕ್ರನು ದ್ವಿಕಳತ್ರಯೋಗವನ್ನು ಕೊಡುವನು. ದಾಂಪತ್ಯಜೀವನ ವಿಷಯವನ್ನು ಚಿಂತಿಸುವಾಗ ಶುಕ್ರನಿಗೆ ಸೇರಿರುವ ಗ್ರಹರನ್ನು ನೋಡಿಕೊಳ್ಳಬೇಕಿದೆ. ಚಂದ್ರ ಶುಕ್ರ, ರವಿ ಶುಕ್ರ, ಕುಜ ಶುಕ್ರ, ಬುಧ ಶುಕ್ರ, ಶನಿ ಶುಕ್ರ ಮತ್ತು ರವಿ ಚಂದ್ರ ಯುತಿಗಳಿಂದ ವಿವಾಹ ಜೀವನದಲ್ಲಿರುವ ಬೇರೆ ಬೇರೆ ಸ್ಥಿತಿಯನ್ನು ಚಿಂತಿಸಿಕೊಳ್ಳಬೇಕು. ರವಿ ಚಂದ್ರ ಯುತಿ, ರವಿ ಶುಕ್ರ ಯುತಿ, ಮತ್ತು ಚಂದ್ರ ಶುಕ್ರ ಯುತಿ, ಗುರು ಶುಕ್ರ ಯುತಿಗಳು ಸಾಂಪ್ರದಾಯಿಕ ವಿವಾಹ ಜೀವನವನ್ನು ಉಂಟುಮಾಡುತ್ತಿರುವನು. ಕುಜ ಶುಕ್ರ ಯುತಿ ಸಂಪರ್ಕಗಳು ನವೀನ ಸರಣಿಯ ಪ್ರೇಮ ಹಾಗೂ ಗಾಂಧರ್ವ ವಿವಾಹಕ್ಕೆ ಎಡೆಯನ್ನು ಕೊಡುವುದು. ಕುಜ ಶುಕ್ರರ ಸಂಪರ್ಕವನ್ನು ನೋಡುವಾಗ ರವಿಯನ್ನೂ ನೋಡುವ ಅಗತ್ಯವಿದೆ. ಕುಜನ ವರ್ಣವು ಶುಕ್ರನ ಮೇಲೆ ಉದಯಾಸ್ತಮನ ಕಾಲದಲ್ಲಿ ಪೂರ್ವ ಯಾ ಪಶ್ಚಿಮ ದಿಕ್ಕಿನಲ್ಲಿ ಬೀಳುತ್ತಿರುವುದನ್ನು ನಾವು ಕುಜ ಶುಕ್ರರ ಯುತಿಯಲ್ಲಿ ನಾವು ಕಾಣುವೆವು. ಶುಕ್ರ ಕುಜರ ಯುತಿ ದರ್ಶನ ರಾತ್ರಿ ಸಾಯಂಕಾಲದ ನಂತರ ಕಂಡುಬಂದರೆ ಅದಕ್ಕೆ ಪಶ್ಚಿಮ ದಿಕ್ಕಿನಲ್ಲಿ ತೋರುವ ಯುತಿಯೆಂದೂ, ಬೆಳಗ್ಗಿನ ಜಾವ ಕಂಡರೆ ಪೂರ್ವ ದಿಕ್ಕಿನ ಯುತಿಯೆಂದೂ ಹೇಳುತ್ತಿರುವೆವು. ಈ ರೀತಿಯಿಂದ ಉದಯವನ್ನು ಹೊಂದಲೂ ಸೂರ್ಯನಿಂದ ಮುಂದೆ ಹಿಂದು ಶುಕ್ರನಿರುವುದೇ ಕಾರಣವಾಗುತ್ತದೆ. ಸೂರ್ಯನಿಂದ ಶುಕ್ರನು ಮುಂದಿದ್ದರೆ ಶುಕ್ರನು ಪಶ್ಚಿಮ ದಿಕ್ಕಿನಲ್ಲಿ ತೋರುವನು. ಈ ಶುಕ್ರನಿಗೆ ಕುಜ ಸಂಪರ್ಕವಾದಾಗ ತಿಳಿಯತಕ್ಕ ಫಲ ಬೇರೆ. ಸೂರ್ಯನಿಂದ ಹಿಂದಿರುವ ಶುಕ್ರನು ಬೆಳ ಜಾವದಲ್ಲಿ ತೋರುವನು. ಈ ಶುಕ್ರನು ಪೂರ್ವ ದಿಶೆಯವನಾಗುತ್ತಾನೆ. ಈ ಎರಡು ರೀತಿಯ ಶುಕ್ರನ ಮೇಲೆ ಕುಜನ ಪ್ರಭಾವ ಬಿದ್ದಾಗ ಅತನ ವರ್ಣ ಬೇರೆ ಬೇರೆಯಾಗಿಯೇ ಕಂಡುಬರುವುದು. ಪಶ್ಚಿಮದ ಶುಕ್ರನಿಗೆ ಕುಜ ಸಂಪರ್ಕದಿಂದ ಕೆಂಪು ಬಣ್ಣ ಶುಕ್ರನಿಗೆ ಬಿದ್ದು ಪಾಂಡುರ ವರ್ಣವಾಗುತ್ತಿರುವುದು. ಬೆಳಗ್ಗಿನ ಶುಕ್ರನಿಗೆ ಕುಜನ ಬಣ್ಣ ಬಿದ್ದು ಗುಲಾಬಿ ಹೂವಿನ ವರ್ಣಗೊಳ್ಳುತ್ತಿರುವನು. ಈ ಎರಡು ಯುತಿಗಳಿಂದಲೂ ಶುಕ್ರನ ವರ್ಣ ಚಿತ್ತಾಕರ್ಷಕಗೊಳ್ಳುತ್ತಿರುವುದು. ಈ ಚಿತ್ತಾಕರ್ಷಕತ್ವದ ಮೂಲಕ ಕಾಮಸಂಪರ್ಕದ ಪ್ರೇರಣೆ ಚಿತ್ತಸಂಪರ್ಕವನ್ನು ಹೊಂದಿ ಉಂಟಾಗುತ್ತಿರುವುದು. ಮೆಚ್ಚಿದವನಿಗೆ ಮಸಣವೇ ಸುಖ ಎಂಬ ಗಾದೆ ನಮ್ಮಲ್ಲಿ ಬಳಕೆಯಲ್ಲಿದೆ. ಮನದಿಂದ ಮೆಚ್ಚಿ ಕಾಮವಾಸನೆಯ ಇಂದ್ರಿಯ ಭೋಗ ಸುಖಗೊಳ್ಳಲು ಹೊರಡುವವರು ನಮ್ಮಲ್ಲಿ ಬಳಕೆಯಲ್ಲಿದೆ. ಮನದಿಂದ ಮೆಚ್ಚಿ ಕಾವ ವಾಸನೆಯ ಇಂದ್ರಿಯ ಭೋಗಸುಖಗೊಳ್ಳಲು ಹೊಡುವವರು ನಮ್ಮಲ್ಲಿ ಎಷ್ಟು ಮಂದಿ ಇಲ್ಲ. ಇದಕ್ಕೆ ಕಾರಣವೇನು? ಕಾರಣರಾರು ಎಂದು ನೋಡಿದರೆ ಶುಕ್ರನೇ ಮುಖ್ಯನೆಂದೂ ಅವನಿಗೆ ಉಂಟಾದ ಗ್ರಹಸಂಯೋಗವೇ ಇದಕ್ಕೆ ಹೇತುವೆಂದೂ ಜೋತಿಷ ಶಾಸ್ತ್ರಜ್ಞರು ಸಿದ್ಧಗೊಳಿಸಬಹುದಾಗಿದೆ. ಈ ವಿಷಯವನ್ನು ಕುರಿತು ಮುಂದೆ ಗ್ರಹಯೋಗ ಭಾಗದಲ್ಲಿ ಕೊಡಲಾಗುವುದು.

ದೃಢವಾದ ಬಟ್ಟೆ ವೃಷಭದ ಶುಕ್ರನಿಗೆ. ಮುತ್ತು ಶುಕ್ರನಿಗೆ. ಸ್ತ್ರೀಕಾರಕ ಗ್ರಹ ಮತ್ತು ಮುತ್ತಿನ ವರ್ಣದವನೆಂದೂ ಶುಕ್ರನಿಗೆ ಮುತ್ತು ಎಂಬ ಫಲವನ್ನು ಬೋಧಿಸಿದುದಾಗಿದೆ. ವಸಂತ ಶುಕ್ರನ ಋತು. ವಸಂತ ಋತುವೇ ಕಾಮಿಗಳ ಕಾಲ. ವಸಂತ ಋತುದಲ್ಲಿಯೇ ಅಧಿಕ ವಿವಾಹಗಳು ನಡೆಯುತ್ತಿರುವವು. ಚೈತ್ರ ವೈಶಾಖ ಮಾಸಗಳು ವಸಂತ ಋತುವಿನವು. ನಷ್ಟ ವಸ್ತು ಪ್ರಶ್ನೆಯಲ್ಲೂ ಋತುವನ್ನು ನಿರ್ದೇಶಿಸಬಹುದಾಗಿದೆ. ಹುಳಿರಸ. ಗರ್ಭಿಣಿಯ ಮೋಹದ ಪ್ರಶ್ನೆಯಲ್ಲಿ ಇದು ಚಿಂತನೀಯ. ಶುಕ್ರನಿಂದ ಮಸಾಲೆಯ ಮತ್ತು ಮಧುರ ರಸವನ್ನು ವಿವೇಚನೀಯವಿದೆ. ರಾಶಿಚಕ್ರದ ಅವಕಹಡ ಬೋಧೆಯಿಂದ ವಿಭಿನ್ನ ಜಾತಿಭೇದವು ರಾಶಿಗಳಿಗೆ ಕಂಡುಬರುವುದು. ಇದರಿಂದಲೇ ಶುಕ್ರನ ಜಾತಿ ವಿಚಾರದಲ್ಲಿ ಭಿನ್ನತೆ ಶಾಸ್ತ್ರಕಾರರಲ್ಲಿ ಕಾಣುತ್ತದೆ. ಅವೂ ಚಿಂತನೀಯಗಳೇ ಆಗಿರುತ್ತವೆ.

—೦— (ಸಶೇಷ)

ತಾ. 1—10—1961ರಿಂದ
ಬದಲಾವಣೆಗೊಂಡ

ರೈಲ್ವೇ ಸಮಯ

ಮಂಗಳೂರಿಂದ ಹೊರಡುವ ಬಂಡಿಗಳು

1 ಮಂಗಳೂರು—ಕಣ್ಣಾನೂರು ಪೆಸೆಂಜರ್—ಬೆಳಿಗ್ಗೆ 6-15
2 ಮಂಗಳೂರು—ಮದ್ರಾಸ್ ಮೈಲ್ —ಬೆಳಿಗ್ಗೆ 9-30
3 ಮಂಗಳೂರು—ಕಲ್ಲಿಕೋಟೆ ಪೆಸೆಂಜರ್—ಮಧ್ಯಾಹ್ನ 1-00
4 ಮಂಗಳೂರು—ಕಾಸರಗೋಡು ಪೆಸೆಂಜರ್—ಸಾಯಂ. 5-30
5 ಮಲಬಾರ್ ಎಕ್ಸ್‌ಪ್ರೆಸ್ —ಸಾಯಂ. 6-50

ಮಂಗಳೂರಿಗೆ ತಲಪುವುದು

1 ಕಣ್ಣಾನೂರು—ಮಂಗಳೂರು ಪೆಸೆಂಜರ್—ಬೆಳಿಗ್ಗೆ 9-20
2 ಮಲಬಾರ್ ಎಕ್ಸ್‌ಪ್ರೆಸ್ —ಬೆಳಿಗ್ಗೆ 11-50
3 ಕಲ್ಲಿಕೋಟೆ—ಮಂಗಳೂರು ಪೆಸೆಂಜರ್—ಮಧ್ಯಾಹ್ನ 3-45
4 ಮದ್ರಾಸ್—ಮಂಗಳೂರು ಮೈಲ್ —ಸಾಯಂ. 5-05
5 ಕೊಚ್ಚಿನ್—ಮಂಗಳೂರು ಪೆಸೆಂಜರ್—ರಾತ್ರಿ 10-25

ಈ ವಾರದ ಭವಿಷ್ಯ

ಶ್ರೀ ಎಮ್. ಸುಬ್ರಾಯನ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.
ತಾರೀಕು ೧೫—೧೦—೧೯೬೧ರಿಂದ
ತಾ. ೨೧—೧೦—೧೯೬೧ರ ವರೆಗೆ.

ಮೇಷ: ನಿಮ್ಮ ಗ್ರಹಮಾನವು ನಿಮ್ಮ ಅದೃಷ್ಟ ರಚನೆಗೆ ಕಾರಣವೆಂದೇ ನೀವು ಬಲ್ಲವರು. ಈ ವಾರದ ಗ್ರಹಮಾನ ನಿಮ್ಮ ಅದೃಷ್ಟ ರಚನೆಗೆ ಯೋಗ್ಯಕಾಲವಾಗಿರುತ್ತದೆ. ಕರ್ಮದ ಗುರು ಶನಿಗಳೂ ಪಕ್ಕ ಸಪ್ತಮದ ರವಿಯೂ ಅನುಕೂಲ ವಾತಾವರಣವನ್ನು ನಿರ್ಮಿಸಿರುವರು. ಆದ್ದರಿಂದ ನವೀನ ಕರ್ಮಸಾಧನಾ ಯೋಜನೆಗೆ ಇದೇ ಸಮಯವೆಂದು ಭಾವಿಸಿರಿ. ಅಭಿವೃದ್ಧಿ ಪ್ರಗತಿಗಳು ಚೆನ್ನಾಗುವವು.

ವೃಷಭ: ಕೆಲಸಗಳೆಲ್ಲಾ ಅಪೂರ್ಣಗಳಾಗಿರುವವು. ಇದರಿಂದ ಅಶಾಂತಿಯುತರಾಗಿ ಕಂಡುಬರುವಿರಿ. ಬಂಧುಜನರ ಭೇಟಿಯನ್ನು ಹೊಂದಲಿರುವಿರಿ. ದೂರಗತ ಗೆಳೆಯರ ಸುಖವಾರ್ತೆಯನ್ನು ಕೇಳುವಿರಿ. ವಿದ್ಯಾಜೀವನದವರು ಪ್ರಗತಿಗಿರುವ ಕರ್ಮಾಸಕ್ತರಾಗಿ ಕಂಡುಬರುವರು. ನೌಕರರಿಗೆ ಸ್ಥಾನಾಂತರವಾಗಲಿರುತ್ತದೆ.

ಮಿಥುನ: ಸಾಮೂಹಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ಆದರಿಂದ ಕೀರ್ತಿಯನ್ನು ಹೊಂದಲಿರುವ ಯೋಗಯುಕ್ತರಾಗಿರುವಿರಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದು. ಹಿರಿಯರ ಆರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ಪ್ರಯಾಣವನ್ನು ಮಾಡಲಿರುವಿರಿ.

ಕರ್ಕಟಕ: ನಿರಂತರ ಕೃತ್ಯಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿಯೇ ಕಂಡುಬರುವುದು. ಮಹಾಜನರ ಭೇಟಿಯನ್ನು ಹೊಂದಲಿರುವಿರಿ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ದಾಂಪತ್ಯಜೀವನದಲ್ಲಿ ತೊಡಕುಗಳು ಕಂಡುಬರುವವು. ನೌಕರರಿಗೆ ಪ್ರಗತಿಕರ.

ಸಿಂಹ: ಹೊಸ ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ಎಲ್ಲಾ ಕೆಲಸಗಳೂ ಸಾವಕಾಶವಾಗಿ ಕೊನೆಗೊಳ್ಳುವವು. ಸಂಪತ್ತಿನಿಂದ ಪ್ರಗತಿಗಿರುವ ಸಂಘಟನೆಯುಂಟಾಗಲಿಹೆ. ಕೋರ್ಟು ಕಾರ್ಯಗಳಲ್ಲಿ ಯಶಸ್ವಿಗಳಾಗುವಿರಿ. ನೌಕರರಿಗೆ ಸ್ಥಾನಾಂತರಕ್ಕಿರುವ ಅವಕಾಶವಿದೆ.

ಕನ್ಯಾ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ತೋರುವರು ಇದರಿಂದ ಮನಸ್ಸಿನಲ್ಲಿ ಅಶಾಂತಿಯುಳ್ಳವರಾಗಿರುವಿರಿ. ಐದರ ಶನಿ ಗುರುಗಳು ಮಕ್ಕಳ ಸಂಬಂಧವಾದ ಚಿಂತೆಯನ್ನು ಕೊಡುವರು ದೂರ ಪ್ರಯಾಣವನ್ನು ಮಾಡಲಿರುವ ಯೋಗಯುಕ್ತರಾಗಿರುವಿರಿ. ವಿದ್ಯಾಜೀವನದವರಿಗೆ ಪ್ರಗತಿಕರ.

ತುಲಾ: ಸಮಯಾವಕಾಶವು ಕೆಲಸಗಳಿಂದ ತುಂಬಿದ್ದು ಕಡಮೆಯಾಗಿರುವುದು. ನ್ಯಾಯವರ್ತನೆಯಿಂದ ಕೂಡಿದವರಾಗಿದ್ದು ಜನರ ಆದರಕ್ಕೆ ಪಾತ್ರರಾಗುವಿರಿ. ಬಂಧುಜನರ ಭೇಟಿಯನ್ನು ಹೊಂದಲಿರುವಿರಿ. ನೌಕರರು ಅಭಿವೃದ್ಧಿಯಿಂದ ಕೂಡಿದವರಾಗುವರು. ಕೋರ್ಟು ವ್ಯವಹಾರಗಳಲ್ಲಿ ಜಯವನ್ನು ಹೊಂದಲಿರುವಿರಿ. ಪ್ರಯಾಣವಿದೆ.

ವೃಶ್ಚಿಕ: ಸಾಮುದಾಯಿಕ ಜೀವನದಲ್ಲಿ ಆಸಕ್ತಿಯುಳ್ಳವರಾಗಿರುವಿರಿ. ಕುಟುಂಬಾಭಿವೃದ್ಧಿಯು ಸಂಭವಿಸಲಿರುವುದು. ಸಂಪತ್ತಿನ ನೆಲೆಯಿಂದ ಪ್ರಗತಿಯುಳ್ಳವರಾಗುವಿರಿ. ವಾಸಸ್ಥಾನದ ಬದಲಾವಣೆಯು ಸಂಭವಿಸಲಿರುತ್ತದೆ. ಪ್ರಯಾಣವನ್ನು ಮಾಡಲಿರುವ ಯೋಗವಿರುತ್ತದೆ.

ಧನು: ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಮನಸ್ಸು ಸ್ಥಿರತೆಯಿಂದ ಕೂಡಿರುವುದಿಲ್ಲ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ಹಿರಿಯರ ಅಗಲುವಿಕೆಯನ್ನು ಹೊಂದಲಿರುವ ಯೋಗಯುಕ್ತರಾಗಿರುವಿರಿ. ಪತ್ರ ವ್ಯವಹಾರಗಳು ಬಹಳವಾಗಿ ನಡೆಯಲಿರುತ್ತವೆ.

ಮಕರ: ಕರ್ಮದ ರವಿಯು ಯಶಸ್ಸನ್ನು ತಂದುಕೊಡುವನು. ಕುಟುಂಬದಲ್ಲಿ ಶುಭಕೆಲಸಗಳು ಸಂಭವಿಸಲಿರುತ್ತವೆ. ವಿದ್ಯಾಜೀವನದವರು ಪ್ರಗತಿಯಿಂದ ಕೂಡಿದವರಾಗುವರು. ನೌಕರರು ಸ್ಥಾನಾಂತರವನ್ನು ಹೊಂದಲಿರುವರು. ಪ್ರಯಾಣವನ್ನು ಮಾಡಲಿರುವಿರಿ.

ಕುಂಭ: ದೊಡ್ಡ ದೊಡ್ಡ ಮನುಷ್ಯರ ಅವರಿಂದ ಸಹಾಯ ದೂರ ಪ್ರಯಾಣ ಆದರಿಂದ ಉನ್ನತಿಗಳಿಗಿರುವ ಅವಕಾಶವಿರುತ್ತದೆ. ಕುಟುಂಬೀಯರ ವಿಯೋಗವನ್ನು ಹೊಂದಲಿರುವಿರಿ. ವಿದ್ಯಾಜೀವನದವರು ಅಭಿವೃದ್ಧಿಯಿಂದ ಕೂಡಿದವರಾಗುವರು. ನೌಕರರಿಗೆ ಪ್ರಗತಿಕರ.

ಮೀನ: ಮಾನಸಿಕ ಶಾಂತಿ ಕಡಮೆಯಾಗಿರುತ್ತದೆ. ಬಂಧುಜನರ ಭೇಟಿಯನ್ನು ಹೊಂದಲಿರುವಿರಿ. ಸಂಶಯದ ಮನಸ್ಸಿನಿಂದ ಕೂಡಿದವರಾಗಿರುವಿರಿ. ಕುಟುಂಬೀಯರ ವಿಯೋಗವಾಗಲಿದೆ. ನಷ್ಟ ಸಂಪತ್ತನ್ನು ಹೊಂದಲಿರುವ ಯೋಗವಿರುತ್ತದೆ. ಪತ್ರವ್ಯವಹಾರಗಳು ಬಹಳವಾಗಿ ನಡೆಯುವುವು.

——

ವಾರದ ಪ್ರಭಾತ ಪಂಚಾಂಗ

(ಕನ್ಯಾ, ಆಶ್ವೀಜ-ಶುದ್ಧ)

ತಾರೀಕು	ವಾರ	ತಿಥಿ: ಸೌರ	ತಿಥಿ: ಚಾಂದ್ರ	ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
15	ರವಿ	೨೯	ಷ ೪೪|||	ಮೂ ೫೫|	ಶೋ ೩೨|	ಕೌ ೧೬	೧೬|	೪೦	ಚಿತ್ರಾ ೨೦||
16	ಚಂದ್ರ	೩೦ ತುಲಾ	ಸ ೪೧|	ಪೂಷಾ ೫೩|||	ಅ ೨೬|	ಗ ೧೩	೧೮|||	೪೨	೨೫
17	ಕುಜ	೧	ಅ ೩೭	ಉಷಾ ೫೧	ಸು ೨೦|	ಭ ೯|	೧೨|||	೩೫|||	೨೯|
18	ಬುಧ	೨	ನ ೩೧|||	ಶ್ರ ೪೭||	ಧೃ ೧೩||	ಬಾ ೪||	ವಿಶೇ೧, ೫೯|||	೧೯	೩೩||
19	ಗುರು	೩	ದ ೨೬	ಧ ೪೩|	ಶೂ ೬|	ಗ ೨೬	ವಿಶೆ । ೨.೬|||	೨೩	೨೮|
20	ಶುಕ್ರ	೪	ಏ ೧೯|	ಶ ೩೮|	ವ್ರ ೪೯|||	ಭ ೧೯|	ವಿಶೆ೩|| ೫೩	೨೧|||	೪೨|||
21	ಶನಿ	೫	ದ್ವಾ ೧೨|	ಪೂಭಾ ೩೩	ಧ್ರು ೪೧	ಬಾ ೧೨|	೫೫	೧೪||	೪೭|

ರವಿವಾರ ಶಾರದಾ ಪೂಜೆ. ಕುಜವಾರ ತುಲಾ ಸಂಕ್ರಮಣ. ಬುಧವಾರ ವಿಜಯದಶಮಿ.



ಸಂಸ್ಕೃತ ಲೋಕೋಕ್ತಿಗಳು

ಸಂಗ್ರಾಹಕ:

ವೈದ್ಯಗುರು ಎಂ. ಆರ್. ಭಟ್.

396 ತ್ಯಜ ದುರ್ಜನ ಸಂಸರ್ಗಮ್

ದುರ್ಜನರ ಸಹವಾಸವನ್ನು ಬಿಟ್ಟು ಬಿಡು.

397 ಭಜ ಸಾಧು ಸಮಾಗಮಮ್

ಸಜ್ಜನರ ಸಹವಾಸವನ್ನು ಹೊಂದು.

398 ಕುರು ಪುಣ್ಯಮಹೋರಾತ್ರಮ್

ಹಗಲಿರುಳು ಪುಣ್ಯಮಾಡುತ್ತಿರು.

399 ಸ್ಮರ ಸರ್ವೇಶ್ವರಂ ಹರಿಮ್

ಸರ್ವೇಶ್ವರನಾದ ದೇವರನ್ನು ಸ್ಮರಿಸುತ್ತಿರು.

400 ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್

ವಿದ್ಯೆಯು ವಿನಯವನ್ನು ನೀಡುತ್ತದೆ; ವಿನಯವು ಯೋಗ್ಯತೆಯನ್ನು ನೀಡುತ್ತದೆ.

401 ಪಾತ್ರತ್ವಾ ದ್ಧನಮಾಪ್ನೋತಿ ಧನಾ ದ್ಧರ್ಮಸ್ತತಃ ಸುಖಮ್

ಯೋಗ್ಯತೆಯಿಂದ ಧನವು ಲಭಿಸುತ್ತದೆ; ಧನದಿಂದ ಧರ್ಮವು ಮತ್ತು ಧರ್ಮದಿಂದ ಸುಖವು ಲಭಿಸುತ್ತದೆ.

402 ವೈದ್ಯಾ ಯತ್ರ ನ ವಿದ್ಯಂತೇ ತತ್ರ ವಾಸಂ ನಕಾರಯೇತ್

ವೈದ್ಯರಿಲ್ಲದ ಊರಿನಲ್ಲಿ ವಾಸಮಾಡಬಾರದು.

403 ಅನರ್ಘಮಪಿ ಮಾಣಿಕ್ಯಂ ಹೇಮಾಶ್ರಯಮಪೇಕ್ಷತೇ

ಅಮೂಲ್ಯವಾದರೂ ಕೂಡ, ರತ್ನವು ಚಿನ್ನದ ಆಶ್ರಯವನ್ನು ಅಪೇಕ್ಷಿಸುತ್ತದೆ.

404 ನಿರಾಶ್ರಯಾ ನ ಶೋಭಂತೇ ಪಂಡಿತಾ ವನಿತಾಲತಾಃ

ಆಶ್ರಯವನ್ನು ಹೊಂದದೆ, ಪಂಡಿತರೂ ಹೆಂಗಸರೂ ಬಳ್ಳಿಗಳೂ ಶೋಭಿಸುವುದಿಲ್ಲ.

405 ಕುಗ್ರಾಮವಾಸಃ ಕುಲಹೀನ ಸೇವಾ ಮೂರ್ಖಶ್ಚ ಪುತ್ರೋ ವಿನಾಗ್ನಿನಾ ದಹಂತಿ ಕಾಯಮ್

ಕೆಟ್ಟ ಹಳ್ಳಿಯಲ್ಲಿ ವಾಸಿಸುವುದು, ಕುಲಹೀನರ ಸೇವೆಮಾಡುವುದು, ಮತ್ತು ಮೂರ್ಖಪುತ್ರನಿರುವುದು— ಈ ಮೂರು ಬೆಂಕಿಯಿಲ್ಲದ ಮನುಷ್ಯನನ್ನು ಸುಡುತ್ತವೆ.

406 ವಿಧವಾ ಚ ಕನ್ಯಾಭಾರ್ಯಾ ಗೃಹೇ ಕ್ರೋಧಮುಖೀ ಚ ನಿತ್ಯಂ ನಿರ್ಧನ ಜೀವನಂ ಚ ವಿನಾಗ್ನಿನಾ ದಹಂತಿ ಕಾಯಮ್

ಕನ್ಯೆಯು ಬಾಲವಿಧವೆಯಾಗುವುದು, ಸ್ವಗೃಹದಲ್ಲಿ ಹೆಂಡತಿಯು ದಿನಾಲೂ ರೇಗುವುದು ಮತ್ತು ಸಂಪತ್ತುಗತಿಸಿದ ನಂತರ ಜೀವಿಸುವುದು – ಈ ಮೂರು ಬೆಂಕಿಯಿಲ್ಲದೆ ಮಾನವನನ್ನು ಸುಡುತ್ತವೆ.

407 ಅಸಂತುಷ್ಟೋ ದ್ವಿಜೋ ನಷ್ಟಃ

ಅಸಂತುಷ್ಟನಾದ ಬ್ರಾಹ್ಮಣನು ಹಾಳಾಗುತ್ತಾನೆ.

408 ಸಂತುಷ್ಟೋ ಭೂಪತಿರ್ನಷ್ಟಃ

ಸಂತುಷ್ಟನಾದ ಅರಸನು ಹಾಳಾಗುತ್ತಾನೆ.

409 ಸಲಜ್ಜಾ ಗಣಿಕಾ ನಷ್ಟಾ

ಲಜ್ಜೆಯಿದ್ದ ವೇಶ್ಯೆಯು ಹಾಳಾಗುತ್ತಾಳೆ (ಲೋಕಪ್ರಿಯವೆನಿಸಳು).

410 ನಿರ್ಲಜ್ಜಾ ಕುಲಾಂಗನಾ ನಷ್ಟಾ

ಲಜ್ಜೆಯನ್ನು ಕಳಕೊಂಡ, ಕುಲಸ್ತ್ರೀಯು ಹಾಳಾಗುತ್ತಾಳೆ.

411 ಶೈಲೇ ಶೈಲೇ ನ ಮಾಣಿಕ್ಯಮ್

ಪ್ರತಿ ಒಂದು ಪರ್ವತದಲ್ಲಿ ರತ್ನವು ಲಭಿಸದು.

412 ಮೌಕ್ತಿಕಂ ನ ಗಜೇ ಗಜೇ

ಪ್ರತಿ ಒಂದು ಆನೆಯಲ್ಲಿ ಮುತ್ತು ಇರುವುದಿಲ್ಲ

413 ಸಾಧವೋ ನ ಹಿ ಸರ್ವತ್ರ

ನಿಜವಾಗಿ ಸಾಧುಗಳು ಎಲ್ಲಾ ಎಡೆಗಳಲ್ಲಿ ಇರುವುದಿಲ್ಲ.

414 ಚಂದನಂ ನ ವನೇ ವನೇ

ಪ್ರತಿ ಒಂದು ಕಾಡಿನಲ್ಲಿ ಗಂಧದ ಮರವು ಇರುವುದಿಲ್ಲ.

415 ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ

ದಾನ, ಭೋಗ ಮತ್ತು ನಾಶಗಳೆಂಬ ಮೂರು ಗತಿಗಳು ಧನಕ್ಕೆ ಉಂಟಾಗುತ್ತವೆ.

416 ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿಃ

ದಾನಮಾಡದವನಿಗೆ ಹಾಗೂ ಧನವನ್ನು ಅನುಭವಿಸದವನಿಗೆ, ಧನ ನಾಶವು ಬರುವುದು ಸಹಜವೇ ಸರಿ.

417 ನಾಗೋ ಭಾತಿ ಮದೇನ ಖಂಜಲಧರೈಃ ಪೂರ್ಣೇಂದು ನಾಶರ್ವರೀ

ಆನೆಯು ಗರ್ವ ಬಂದಾಗ ಶೋಭಿಸುತ್ತದೆ; ಆಕಾಶವು ಮೋಡಗಳಿಂದ ಶೋಭಿಸುತ್ತದೆ; ರಾತ್ರಿಯು ಪೂರ್ಣ ಚಂದ್ರನಿಂದ ಶೋಭಿಸುತ್ತದೆ.

418 ಶೀಲೇ ನ ಪ್ರಮದಾ ಜವೇ ನ ತುರಗೋ ನಿತ್ಯೋತ್ಸವೈರ್ಮಂದಿರಂಭಾತಿ

ಯೌವನ ಸ್ತ್ರೀಯು ಒಳ್ಳೇ ಸ್ವಭಾವದಿಂದ ಶೋಭಿಸುತ್ತಾಳೆ; ಕುದುರೆಯು ವೇಗದಿಂದ ಶೋಭಿಸುತ್ತದೆ; ಮನೆಯು ನಿತ್ಯೋತ್ಸವಗಳಿಂದ ಶೋಭಿಸುತ್ತದೆ.

419 ವಾಣೀ ವ್ಯಾಕರಣೇ ನ ಹಂಸ ಮಿಥುನೈರ್ನದ್ಯಃ ಸಭಾ ಪಂಡಿತೈರ್ಭಾತಿ

ಮಾತು ವ್ಯಾಕರಣದಿಂದ ಶೋಭಿಸುತ್ತದೆ; ನದಿಗಳು ಹಂಸ ದಂಪತಿಗಳಿಂದ ಶೋಭಿಸುತ್ತವೆ; ಸಭೆಯು ಪಂಡಿತರಿಂದ ಶೋಭಿಸುತ್ತದೆ.

420 ಸತ್ಪುತ್ರೇಣ ಕುಲಂ ನೃಪೇಣ ವಸುಧಾ ಲೋಕತ್ರಯಂ ಭಾನುನಾ

ಕುಲವು ಸತ್ಪುತ್ರನಿಂದ ಶೋಭಿಸುತ್ತದೆ; ಭೂಮಿಯು ಅರಸನಿಂದ ಶೋಭಿಸುತ್ತದೆ; ಮತ್ತು ಮೂರು ಲೋಕಗಳೆಲ್ಲಾ ಸೂರ್ಯನಿಂದ ಶೋಭಿಸುತ್ತವೆ.

421 ಗತೋ ಬಹುತರಃ ಕಾಲಃ ಸ್ವಲ್ಪ ಏವಾವಶಿಷ್ಯತೇ

ಹೆಚ್ಚು ಕಾಲವು ಗತಿಸಿತು; ಸ್ವಲ್ಪ ಮಾತ್ರವೇ ಉಳಿದಿದೆ

422 ಕೋ ಲಾಭೋ ಗುಣಿ ಸಂಗಮಃ

ಲಾಭವು ಯಾವುದು? ಗುಣವಂತರ ಮೈತ್ರಿ

423 ಕಿಮು ಸುಖಂ ಪ್ರಾಜ್ಞೇತರೈಃ ಸಂಗತಿಃ

ದುಃಖ ಯಾವುದು? ಅಜ್ಞಾನಿಗಳೊಡನೆ ಇರುವುದು

424 ಕಾ ಹಾನಿಃ ಸಮಯುಚ್ಯುತಿಃ

ಹಾನಿ ಯಾವುದು? ಕಾಲವನ್ನು ವೃಥಾ ಕಳೆಯುವುದು.

425 ನಿಪುಣತಾ ಕಾ ಧರ್ಮ ತತ್ತ್ವೇರತಿಃ

ನಿಪುಣತೆ ಯಾವುದು? ಧರ್ಮದ ತತ್ತ್ವಗಳಲ್ಲಿ ನಿರತವಾಗುವುದು.

426 ಕಃ ಶೂರೋ ವಿಜಿತೇಂದ್ರಿಯಃ

ಶೂರನು ಯಾವಾತನು? ಇಂದಿಯನಿಗ್ರಹಮಾಡಿದವನು.

427 ಪ್ರಿಯತಮಾ ಕಾ ಅನುವ್ರತಾ

ಪ್ರಿಯಳು ಯಾರು? ಪತಿವ್ರತೆಯಾದ ಪತ್ನಿಯು.

428 ಕಿಂ ಧನಂ ವಿದ್ಯಾ

ಧನವು ಯಾವುದು? ವಿದ್ಯೆಯು.

429 ಕಿಂ ಸುಖಮಪ್ರವಾಸಗಮನಮ್

ಸುಖವು ಯಾವುದು? ಪರಗೃಹ, ಪರದೇಶಗಳಲ್ಲಿ ವಾಸಿಸದೆ ಇರುವುದು.

430 ರಾಜ್ಯಂ ಕಿಮಾಜ್ಞಾ ಫಲಮ್

ಆಳುವಿಕೆ ಯಾವುದು? ತನ್ನ ಆಜ್ಞಾಪಾಲನೆ.

431 ದಾನಾಯ ಲಕ್ಷ್ಮೀರ್ಯಸ್ಯಸ ವಂದ್ಯಃ

ದಾನಕ್ಕೋಸುಗ (ಪರೋಪಕಾರಕ್ಕೆ) ಐಶ್ವರ್ಯವನ್ನು ಉಪಯೋಗಿಸುವವನು ವಂದ್ಯನು. (ಸಶೇಷ)

— —

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K. V. Shenoy.